## 2003 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 10

## ಕರ್ನಾಟಕ ಲಾಟರಿಗಳ ಮೇಲೆ ತೆರಿಗೆ ಅಧ್ಯಾದೇಶ, 2003

### ಪ್ರಕರಣಗಳ ಪಟ್ಟಿ

ಪ್ರಕರಣಗಳು


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅಧೀನ ಪ್ರಾಧಿಕಾರಿಗಳಿಗೆ ಸೂಚನೆಗಳು
4. ಅಧಿಕಾರಿಗಳ ಅಧಿಕಾರ ಕ್ಷೇತ್ರ
5. ಪದಧಾರಕನ ಬದಲಾವಣೆ
6. ತೆರಿಗೆ ವಿಧಿಸುವಿಕೆ
7. ತೆರಿಗೆಯನ್ನು ಕಡಿಮೆಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ
8. ಪ್ರವರ್ತಕರ ಮತ್ತು ಮಾರಾಟಗಾರರ ನೋಂದಣಿ
9. ವಿವರ ಪಟ್ಟಿಕೆಗಳು ಮತ್ತು ತೆರಿಗೆನಿರ್ಧರಣೆ
10. ತೆರಿಗೆ ನಿರ್ಧರಣೆ ತಪ್ಪಿಸಿಕೊಂಡಿದ್ದ ಡ್ರಾದ ತೆರಿಗೆ ನಿರ್ಧರಣೆ
11. ಮುಂಗಡವಾಗಿ ಕರಸಂದಾಯ
12. ತೆರಿಗೆ ಸಂದಾಯ ಮತ್ತು ವಸೂಲಿ
13. ಕೆಲವು ಇತರ ವ್ಯಕ್ತಿಗಳಿಂದ ತೆರಿಗೆ, ದಂಡ ಅಥವಾ ಇತರ ಯಾವುದೇ ಮೊಬಲಗಿನ ವಸೂಲಿ
14. ವ್ಯವಹಾರದ ವರ್ಗಾವಣೆಯಾದ ಮೇಲೆ ಸಂದಾಯ ಮಾಡಬೇಕಾದ ತೆರಿಗೆ ಕಾನೂನು ಸಮ್ಮತ ಪ್ರತಿನಿಧಿಗಳ ಬಗ್ಗೆ ತೆರಿಗೆ ನಿರ್ಧರಣೆ, ಇತ್ಯಾದಿ
15. ಅಪೀಲುಗಳು
16. ಜಂಟಿ ಆಯುಕ್ತನ ಪುನರೀಕ್ಷಣಾ ಅಧಿಕಾರಗಳು
17. ಆಯುಕ್ತನಿಂದ ಪುನರೀಕ್ಷಣೆ
18. ತಪ್ಪುಗಳ ಸರಿಪಡಿಸುವಿಕೆ
19. ಪ್ರವರ್ತಕರು ಮತ್ತು ಮಾರಾಟಗಾರರು ನಿರ್ವಹಿಸಬೇಕಾದ ಲೆಕ್ಕಪತ್ರಗಳು ಮತ್ತು ದಾಖಲೆಗಳು

20. ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಹಾಗೂ ಪ್ರವೇಶ, ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರಗಳು
21. ರುಜುವಾತಿನ ಹೊಣೆ
22. ನೋಂದಣಿಗೆ ಸಂಬಂಧಿಸಿದ ದಂಡ
23. ವಿವರ ಪತ್ರಗಳ ಅಥವಾ ವಿವರಪಟ್ಟಿಕೆಗಳಿಗೆ ಸಂಬಂಧಿಸಿದಂತೆ ದಂಡಗಳು
24. ದಾಖಲೆಗಳನ್ನು ಇಡುವುದಕ್ಕೆ ಸಂಬಂಧಿಸಿದ ದಂಡಗಳು
25. ದಾಖಲೆಗಳನ್ನು ಹಾಜರುಪಡಿಸುವುದಕ್ಕೆ ಮತ್ತು ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ದಂಡಗಳು
26. ಮೊಹರುಗಳಿಗೆ ಮತ್ತು ಲೆಕ್ಕವಿಡದ ಲಾಟರಿ ಟಿಕೆಟುಗಳಿಗೆ ಸಂಬಂಧಿಸಿದಂತೆ ದಂಡಗಳು
27. ಅಡ್ಡಿಯುಂಟುಮಾಡುವುದು ಇತ್ಯಾದಿ
28. ಮೋಸದಿಂದ ತೆರಿಗೆಯನ್ನು ತಪ್ಪಿಸುವುದು
29. ಅಪರಾಧಗಳ ಸಂಜ್ಞಾನ
30. ಅಪರಾಧಗಳ ರಾಜಿ
31. ಕಂಪೆನಿಗಳಿಂದ ಅಪರಾಧಗಳು
32. ಅಭಿಯೋಜನೆಯಲ್ಲಿ ತೆರಿಗೆ ನಿರ್ಧರಣೆಗಳ ಸಿಂಧುತ್ವವನ್ನು ಪ್ರಶ್ನಿಸತಕ್ಕದ್ದಲ್ಲ
33. ಕೆಲವು ವ್ಯವಹರಣೆಗಳ ಸಂಬಂಧದಲ್ಲಿ ಪ್ರತಿಷೇಧ ಮತ್ತು ಕಾಲ ಪರಿಮಿತಿ
34. ಈ ಅಧ್ಯಾದೇಶದ ಅಡಿಯಲ್ಲಿ ಉಪಬಂಧಿಸಲಾದಂತೆ ಹೊರತು, ನ್ಯಾಯಾಲಯವು ತೆರಿಗೆ ನಿರ್ಧರಣೆಗಳನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಾಟುಗೊಳಿಸತಕ್ಕದ್ದಲ್ಲ
35. ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗುವುದು
36. ಸಾಕ್ಷ್ಯ ನೀಡುವುದಕ್ಕಾಗಿ ವ್ಯಕ್ತಿಗಳನ್ನು ಸಮನು ಮಾಡುವ ಅಧಿಕಾರ
37. ನಿಯಮಗಳ ರಚನಾಧಿಕಾರ
38. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು
39. ತೊಂದರೆಗಳನ್ನು ನಿವಾರಿಸಲು ಅಧಿಕಾರ

**2003 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 10**

**ಕರ್ನಾಟಕ ಲಾಟರಿಗಳ ಮೇಲೆ ತೆರಿಗೆ ಅಧ್ಯಾದೇಶ, 2003**

*(ಭಾರತ ಗಣರಾಜ್ಯದ ಐವತ್ನಾಲ್ಕನೆಯ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2003 ರ ಡಿಸೆಂಬರ್ 6 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಲಾಟರಿಗಳ (ಜೂಜು) ಮೇಲೆ ತೆರಿಗೆ ವಿಧಿಸುವುದಕ್ಕಾಗಿ ಮತ್ತು ಸಂಗ್ರಹಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧ್ಯಾದೇಶ.**

ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿರುವುದರಿಂದ ಮತ್ತು ಲಾಟರಿಗಳ ಮೇಲೆ ತೆರಿಗೆ ವಿಧಿಸುವುದಕ್ಕಾಗಿ ಮತ್ತು ಸಂಗ್ರಹಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಅವಶ್ಯಗೊಳಿಸುವಂಥ ಸನ್ನಿವೇಶಗಳು ಉಂಟಾಗಿವೆ ಎಂದು ಕರ್ನಾಟಕ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಕರ್ನಾಟಕ ರಾಜ್ಯಪಾಲರು ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**ಅಧ್ಯಾಯ - I**

**ಪ್ರಾರಂಭಿಕ**

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ಲಾಟರಿಗಳ ಮೇಲೆ ತೆರಿಗೆ ಅಧ್ಯಾದೇಶ, 2003 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-** ಈ ಅಧ್ಯಾದೇಶದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

---

ಕರ್ನಾಟಕ ರಾಜ್ಯ ಪತ್ರದ ಭಾಗIVಎ ವಿಶೇಷ ಪತ್ರಿಕೆ ಸಂಖ್ಯೆ: 1488 ದಿನಾಂಕ: 6.12.2003 ರಲ್ಲಿ ಪ್ರಕಟಿತ
ಕಡತ ಸಂಖ್ಯೆ: ಸಂವ್ಯಶಾಇ 75 ಶಾಸನ 2003

(1) "ಸಹಾಯಕ ಆಯುಕ್ತ" ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 25) 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತ;

(2) "ಆಯುಕ್ತ" ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 25) 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಮಾಡಲಾದ ವಾಣಿಜ್ಯ ತೆರಿಗೆಗಳ ಆಯುಕ್ತ;

(3) "ಜಂಟಿ ಆಯುಕ್ತ" ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಮಾಡಲಾದ ಜಂಟಿ ಆಯುಕ್ತ;

(4) "ಲಾಟರಿ" ಎಂದರೆ, ಭಾರತ ಸರ್ಕಾರವು ಅಥವಾ ಒಂದು ರಾಜ್ಯಸರ್ಕಾರವು ಅಥವಾ ಕೇಂದ್ರಾಡಳಿತ ಪ್ರದೇಶವು ಅಥವಾ ಭಾರತ ಸರ್ಕಾರದೊಡನೆ ದ್ವಿಪಕ್ಷೀಯ ಒಪ್ಪಂದ ಅಥವಾ ಒಡಂಬಡಿಕೆ ಮಾಡಿಕೊಂಡ ಯಾವುದೇ ದೇಶವು ವ್ಯವಸ್ಥೆಗೊಳಿಸಲಾದ ಲಾಟರಿ ಟಿಕೆಟ್‌ಗಳನ್ನು ಖರೀದಿಸುವ ಮೂಲಕ, ಬಹುಮಾನಗಳನ್ನು ಪಡೆಯಲು ಅದೃಷ್ಟ ಅವಕಾಶದಲ್ಲಿ ಭಾಗವಹಿಸುವ ವ್ಯಕ್ತಿಗಳಿಗೆ ಲಾಟರಿ ಎತ್ತುವ ಅಥವಾ ಅದೃಷ್ಟದ ಅವಕಾಶದಿಂದ ಬಹುಮಾನ ಹಂಚುವುದಕ್ಕಾಗಿ ನಡೆಸುವ ಯಾವುದೇ ಬಗೆಯ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಒಂದು ಕಾರ್ಯಯೋಜನೆ;

(5) "ಪ್ರವರ್ತಕ" ಎಂದರೆ, ಒಂದು ಲಾಟರಿಯನ್ನು ವ್ಯವಸ್ಥೆಗೊಳಿಸುತ್ತಿರುವ, ನಡೆಸುತ್ತಿರುವ ಅಥವಾ ಪ್ರವರ್ತಿಸುತ್ತಿರುವ ಭಾರತಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರ ಅಥವಾ ಒಂದು ಕೇಂದ್ರಾಡಳಿತ ಪ್ರದೇಶ ಅಥವಾ ಯಾವುದೇ ದೇಶ ಮತ್ತು ಅದರಲ್ಲಿ ಅಂಥ ಸರ್ಕಾರ ಅಥವಾ ದೇಶವು ರಾಜ್ಯದಲ್ಲಿ ನೇರವಾಗಿ ಲಾಟರಿ ಟಿಕೆಟ್‌ಗಳನ್ನು ಮಾರಾಟಮಾಡದಿರುವಲ್ಲಿ ಅಂಥ ಸರ್ಕಾರವು ಅಥವಾ ದೇಶವು ತನ್ನ ಪರವಾಗಿ ರಾಜ್ಯದಲ್ಲಿ ಲಾಟರಿ ಟಿಕೆಟ್‌ಗಳನ್ನು ಮಾರಾಟಮಾಡುವುದಕ್ಕಾಗಿ ನೇಮಕಮಾಡಿರುವ ಯಾವೊಬ್ಬ ವ್ಯಕ್ತಿಯು ಒಳಗೊಳ್ಳುತ್ತಾನೆ;

(6) "ತೆರಿಗೆ" ಎಂದರೆ, ಈ ಅಧ್ಯಾದೇಶದ ಅಡಿಯಲ್ಲಿ ಲಾಟರಿಗಳ ಮೇಲೆ ವಿಧಿಸಲಾದ ಮತ್ತು ಸಂಗ್ರಹಿಸಲಾದ ತೆರಿಗೆ;

(7) "ವಾರ" ಎಂದರೆ, ಸೋಮವಾರದಿಂದ ಪ್ರಾರಂಭವಾಗಿ ಭಾನುವಾರದ ವರೆಗಿನ ಒಂದು ವಾರ;

(8) "ವರ್ಷ" ಎಂದರೆ, ಏಪ್ರಿಲ್ ಒಂದನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ;

## ಅಧ್ಯಾಯ - II

## ಪ್ರಾಧಿಕಾರಗಳು

3. **ಅಧೀನ ಪ್ರಾಧಿಕಾರಿಗಳಿಗೆ ಸೂಚನೆಗಳು.-** (1) ರಾಜ್ಯ ಸರ್ಕಾರವು ಅಥವಾ ಆಯುಕ್ತನು, ಈ ಅಧ್ಯಾದೇಶದ ಪ್ರಶಾಸನಕ್ಕಾಗಿ ಈ ಅಧ್ಯಾದೇಶವನ್ನು ಜಾರಿಗೊಳಿಸಲು ನೇಮಕಗೊಂಡ ಎಲ್ಲ ಅಧಿಕಾರಿಗಳಿಗೆ ಮತ್ತು ವ್ಯಕ್ತಿಗಳಿಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು, ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಕಾಲಕಾಲಕ್ಕೆ ನೀಡಬಹುದು ಮತ್ತು ಎಲ್ಲ ಅಂಥ ಅಧಿಕಾರಿಗಳು ಮತ್ತು ವ್ಯಕ್ತಿಗಳು, ರಾಜ್ಯಸರ್ಕಾರದ ಮತ್ತು ಆಯುಕ್ತನ ಅಂಥ ಆದೇಶಗಳು, ಸೂಚನೆಗಳು ಮತ್ತು ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು:

ಪರಂತು, ಅಂಥ ಯಾವುದೇ ಆದೇಶಗಳನ್ನು, ಸೂಚನೆಗಳನ್ನು ಅಥವಾ ನಿರ್ದೇಶನಗಳನ್ನು, ಯಾವುದೇ ಅಪೀಲು ಪ್ರಾಧಿಕಾರವು ತನ್ನ ಅಪೀಲು ವಿಚಾರಣಾ ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ, ಅದರ ವಿವೇಚನೆಗೆ ಅಡ್ಡಿಯಾಗುವಂತೆ ನೀಡತಕ್ಕದ್ದಲ್ಲ.

(2) ಈ ಅಧ್ಯಾದೇಶವನ್ನು ಜಾರಿಗೊಳಿಸಲು ನೇಮಕ ಮಾಡಲಾದ ಎಲ್ಲ ಅಧಿಕಾರಿಗಳು ಮತ್ತು ವ್ಯಕ್ತಿಗಳು, ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರ ಕ್ಷೇತ್ರದೊಳಗಿನ ಜಂಟಿ ಆಯುಕ್ತರು, ಅವರ ಮಾರ್ಗದರ್ಶನಕ್ಕಾಗಿ ನೀಡಬಹುದಾದಂಥ ಆಡಳಿತಾತ್ಮಕ ಸೂಚನೆಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು.

4. **ಅಧಿಕಾರಿಗಳ ಅಧಿಕಾರ ಕ್ಷೇತ್ರ.-** (1) ಜಂಟಿ ಆಯುಕ್ತರುಗಳು, ಆಯುಕ್ತನು ನಿರ್ದೇಶಿಸಬಹುದಾದಂಥ ಪ್ರದೇಶಗಳ ಅಥವಾ ಅಂಥ ಪ್ರವರ್ತಕರ ಅಥವಾ ಪ್ರವರ್ತಕರ ವರ್ಗಗಳ ಅಥವಾ ಅಂಥ ಪ್ರಕರಣಗಳ ಅಥವಾ ಪ್ರಕರಣಗಳ ವರ್ಗಗಳ ಸಂಬಂಧದಲ್ಲಿ ತಮ್ಮ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(2) ಸಹಾಯಕ ಆಯುಕ್ತರುಗಳು, ಆಯುಕ್ತನು ನಿರ್ದೇಶಿಸಬಹುದಾದಂಥ ಪ್ರದೇಶಗಳ ಅಥವಾ ಅಂಥ ಪ್ರವರ್ತಕರ ಅಥವಾ ಪ್ರವರ್ತಕರ ವರ್ಗಗಳ ಅಥವಾ ಪ್ರಕರಣಗಳ ಅಥವಾ ಪ್ರಕರಣಗಳ ವರ್ಗಗಳ ಸಂಬಂಧದಲ್ಲಿ ತಮ್ಮ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

5. **ಪದಧಾರಕನ ಬದಲಾವಣೆ.-** ಈ ಅಧ್ಯಾದೇಶದ ಅಡಿಯಲ್ಲಿನ ಯಾವುದೇ ವ್ಯವಹರಣೆಯ ಸಂಬಂಧದಲ್ಲಿ ಒಬ್ಬ ಅಧಿಕಾರಿಯು ಅಧಿಕಾರವ್ಯಾಪ್ತಿಯನ್ನು

ಚಲಾಯಿಸುವುದು ನಿಂತು ಹೋದಾಗಲೆಲ್ಲ ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮತ್ತು ಚಲಾಯಿಸುವ ಇನ್ನೊಬ್ಬನು ಉತ್ತರಾಧಿಕಾರಿ ಅವನ ಸ್ಥಾನಕ್ಕೆ ಬಂದಾಗಲೆಲ್ಲಾ ಹಾಗೆ ಉತ್ತರಾಧಿಕಾರಿಯಾದ ಅಧಿಕಾರಿಯು, ತನ್ನ ಪೂರ್ವಾಧಿಕಾರಿಯು ಬಿಟ್ಟುಹೋದ ಹಂತದಿಂದ ವ್ಯವಹರಣೆಯನ್ನು ಮುಂದುವರಿಸಬಹುದು:

ಪರಂತು, ವ್ಯವಹರಣೆಯನ್ನು ಹಾಗೆ ಮುಂದುವರಿಸುವ ಮೊದಲು ಪ್ರವರ್ತಕನು, ಹಿಂದಿನ ವ್ಯವಹರಣೆಯನ್ನು ಅಥವಾ ಅದರ ಭಾಗವನ್ನು ಪುನಃ ಪ್ರಾರಂಭಿಸುವಂತೆ ಅಥವಾ ತನ್ನ ವಿರುದ್ಧ ತೆರಿಗೆ ನಿರ್ಧರಣೆಯ ಯಾವುದೇ ಆದೇಶವನ್ನು ಹೊರಡಿಸುವ ಮೊದಲು ಪುನಃ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡುವಂತೆ ಕೋರಬಹುದು.

## ಅಧ್ಯಾಯ - III

### ಲಾಟರಿಗಳ ಮೇಲೆ ತೆರಿಗೆ ವಿಧಿಸುವಿಕೆ

6. **ತೆರಿಗೆ ವಿಧಿಸುವಿಕೆ.-** (1) ಲಾಟರಿಗಳ ಮೇಲೆ ಈ ಮುಂದಿನ ದರಗಳಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು, ಎಂದರೆ:-

(ಎ) ಪ್ರತಿಯೊಂದು ಬಂಪರ್ 'ಡ್ರಾ' ಕ್ಕೆ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳು; ಮತ್ತು

(ಬಿ) ಯಾವುದೇ ಇತರ 'ಡ್ರಾ'ದ ಸಂಬಂಧದಲ್ಲಿ ಒಂದು ಲಕ್ಷ ರೂಪಾಯಿಗಳು.

(2) (1)ನೇ ಪ್ರಕರಣದ ಅಡಿಯಲ್ಲಿ ವಿಧಿಸಲಾದ ತೆರಿಗೆಯನ್ನು ಪ್ರತಿಯೊಬ್ಬ ಪ್ರವರ್ತಕನು ಸಂದಾಯಮಾಡತಕ್ಕದ್ದು.

7. **ತೆರಿಗೆಯನ್ನು ಕಡಿಮೆಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ಈ ಅಧ್ಯಾದೇಶದ ಅಡಿಯಲ್ಲಿ ಸಂದಾಯಮಾಡತಕ್ಕ ಯಾವುದೇ ತೆರಿಗೆಯ ದರವನ್ನು ಕಡಿಮೆ ಮಾಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾಗಿರುವ ತೆರಿಗೆ ದರದಲ್ಲಿಯ ಯಾವುದೇ ಕಡಿತವು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೊಳಪಟ್ಟಿರಬಹುದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ (1)ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಯಾವುದೇ ಅಧಿಸೂಚನೆಯನ್ನು ರದ್ದುಪಡಿಸಬಹುದು ಅಥವಾ ವ್ಯತ್ಯಾಸಮಾಡಬಹುದು.

## ಅಧ್ಯಾಯ - IV

### ನೋಂದಣಿ

**8. ಪ್ರವರ್ತಕರ ಮತ್ತು ಮಾರಾಟಗಾರರ ನೋಂದಣಿ.-** (1) ಪ್ರತಿಯೊಬ್ಬ ಪ್ರವರ್ತಕನು ಮತ್ತು ಪ್ರವರ್ತಕನಿಂದ ನೇರವಾಗಿ ಅಥವಾ ಅನ್ಯಥಾ ಸ್ವೀಕರಿಸಿದ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಈ ಅಧ್ಯಾದೇಶದ ಅಡಿಯಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಶುಲ್ಕವನ್ನು ಸಂದಾಯಮಾಡಿ ಮತ್ತು ಅಂಥ ಅವಧಿಯೊಳಗೆ ತನ್ನನ್ನು ನೋಂದಾಯಿಸಿಕೊಳ್ಳತಕ್ಕದ್ದು:

ಪರಂತು, (ಯಾವುದೇ ಗಣಕೀಕೃತ ಲಾಟರಿ ಜಾಲದ ಲಾಟರಿ ಟಿಕೆಟ್‌ಗಳ ಹೊರತಾಗಿ) ಚಿಲ್ಲರೆಯಾಗಿ ಲಾಟರಿ ಟಿಕೆಟ್‌ಗಳನ್ನು ಸಾಮಾನ್ಯವಾಗಿ ಮಾರಾಟಮಾಡುವ ಒಬ್ಬ ವ್ಯಕ್ತಿಯು, ತನ್ನನ್ನು ನೋಂದಾಯಿಸಿಕೊಳ್ಳಲು ಬದ್ಧನಾಗಿರತಕ್ಕದ್ದಲ್ಲ.

(2) ನೋಂದಣಿಯನ್ನು, ಅದನ್ನು ರದ್ದುಪಡಿಸುವ ವರೆಗೆ ವರ್ಷದಿಂದ ವರ್ಷಕ್ಕೆ ನಿಯಮಿಸಲಾದ ಶುಲ್ಕವನ್ನು ಸಂದಯಮಾಡಿ ನವೀಕರಿಸಬಹುದು.

(3) ಈ ಪ್ರಕರಣದಲ್ಲಿರುವುದಾವುದೂ, ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶ ಅಥವಾ ದೇಶವು ಸ್ವಯಂ ತಾನೇ ಲಾಟರಿ ಟಿಕೆಟ್‌ಗಳನ್ನು ಮಾರಾಟಮಾಡಿದಾಗ ಹೊರತು, ಅನ್ವಯವಾಗಿರತಕ್ಕದ್ದಲ್ಲ.

## ಅಧ್ಯಾಯ - V

### ತೆರಿಗೆ ವಿವರಪಟ್ಟಿಕೆಗಳು, ನಿರ್ಧರಣೆ, ಸಂದಾಯ ವಸೂಲಿ ಮತ್ತು ಸಂಗ್ರಹಣೆ

**9. ವಿವರ ಪಟ್ಟಿಕೆಗಳು ಮತ್ತು ತೆರಿಗೆನಿರ್ಧರಣೆ.-** (1) 11ನೇ ಪ್ರಕರಣದಲ್ಲಿ ಏನೇ ಇದ್ದರೂ, ಪ್ರತಿಯೊಬ್ಬ ಪ್ರವರ್ತಕ ಅಥವಾ ಈ ಅಧ್ಯಾದೇಶದ ಅಡಿಯಲ್ಲಿ ತನ್ನನ್ನು ನೋಂದಾಯಿಸಿಕೊಳ್ಳಲು ಬದ್ಧನಾದ ಪ್ರತಿಯೊಬ್ಬ ವ್ಯಕ್ತಿಯೂ ನಿಯಮಿಸಬಹುದಾದಂತಹ ಅವಧಿಗಾಗಿ ಮತ್ತು ಅಂಥ ಅವಧಿಯ ಒಳಗೆ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡ ಒಂದು ವಿವರ ಪಟ್ಟಿಕೆಯನ್ನು ಸಹಾಯಕ ಆಯುಕ್ತನಿಗೆ ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಯಾವೊಬ್ಬ ಪ್ರವರ್ತಕನು ಯಾವುದೇ ವಿವರಪಟ್ಟಿಕೆಯನ್ನು ಸಲ್ಲಿಸುವ ಮೊದಲು ಅವನು ನಿಯಮಿಸಲಾದ ರೀತಿಯಲ್ಲಿ 11ನೇ ಪ್ರಕರಣದ ಅಡಿಯಲ್ಲಿ ಆ ವಿವರ ಪಟ್ಟಿಕೆಯು ಸಂಬಂಧಪಟ್ಟ ಅವಧಿಗಾಗಿ ತಾನು ಸಂದಾಯ ಮಾಡತಕ್ಕ ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು

ಮತ್ತು ವಿವರ ಪಟ್ಟಿಕೆಯ ಜೊತೆಯಲ್ಲಿ ಅಂಥ ತೆರಿಗೆಯನ್ನು ಸಂದಾಯಮಾಡಿದ ಬಗ್ಗೆ ತೃಪ್ತಿಕರ ರುಜುವಾತನ್ನು ಒದಗಿಸತಕ್ಕದ್ದು ಮತ್ತು ಅಂತಿಮವಾಗಿ ತೆರಿಗೆ ನಿರ್ಧರಣೆ ಮಾಡಿದ ಮೇಲೆ ಹಾಗೆ ಸಂದಾಯಮಾಡಿದ ಮೊಬಲಗನ್ನು ಅಂತಿಮವಾಗಿ ತೆರಿಗೆ ನಿರ್ಧರಣೆ ಮಾಡಿದ ತೆರಿಗೆ ಕುರಿತು ಸಂದಾಯಮಾಡಿದ್ದು ಎಂಬುದಾಗಿ ಭಾವಿಸತಕ್ಕದ್ದು.

(3) ಸಹಾಯಕ ಆಯುಕ್ತನಿಗೆ (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ವಿವರಪಟ್ಟಿಕೆ ಸರಿಯಾದದ್ದು ಮತ್ತು ಪೂರ್ಣವಾದದ್ದು ಎಂದು ಮನದಟ್ಟಾದರೆ ಅವನು ಅದರ ಆಧಾರದ ಮೇಲೆ ಪ್ರವರ್ತಕ ಅಥವಾ ಅಂಥ ವ್ಯಕ್ತಿಯ ತೆರಿಗೆ ನಿರ್ಧರಣೆ ಮಾಡತಕ್ಕದ್ದು.

(4) (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರವರ್ತಕನು ನಿಯಮಿಸಲಾದ ಅವಧಿಗಿಂತ ಮುಂಚೆ ಯಾವ ವಿವರ ಪಟ್ಟಿಕೆಯನ್ನು ಸಲ್ಲಿಸದೇ ಹೋದಲ್ಲಿ ಅಥವಾ ಅವನು ಸಲ್ಲಿಸಿದ ವಿವರ ಪಟ್ಟಿಕೆಯು ಸಹಾಯಕ ಆಯುಕ್ತನಿಗೆ ಸರಿಯಲ್ಲ ಅಥವಾ ಅಪೂರ್ಣ ಎನಿಸಿದರೆ ಅವನು ಪ್ರವರ್ತಕನ ಬಗ್ಗೆ ತನ್ನ ಬಹುಮಟ್ಟಿನ ವಿವೇಚನೆ ಅನುಸಾರ ತೆರಿಗೆ ನಿರ್ಧರಣೆ ಮಾಡತಕ್ಕದ್ದು ಮತ್ತು ಅಂಥ ತೆರಿಗೆ ನಿರ್ಧರಣೆಗೆ ಕಾರಣಗಳನ್ನು ದಾಖಲು ಮಾಡತಕ್ಕದ್ದು:

ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ ಕ್ರಮಕೈಗೊಳ್ಳುವ ಮೊದಲು ಆ ಪ್ರವರ್ತಕ ಅಥವಾ ವ್ಯಕ್ತಿಗೆ ತಾನು ಸಲ್ಲಿಸಿದ ವಿವರಪಟ್ಟಿಕೆಯು ಸರಿಯಾಗಿರುವ ಬಗ್ಗೆ ಅಥವಾ ಪೂರ್ಣವಾಗಿರುವ ಬಗ್ಗೆ ರುಜುವಾತುಪಡಿಸಲು ಸಮಂಜಸ ಅವಕಾಶ ನೀಡತಕ್ಕದ್ದು.

(5) (4)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ತೆರಿಗೆ ನಿರ್ಧರಣೆ ಮಾಡುವಾಗ ಸಹಾಯಕ ಆಯುಕ್ತನು ನಿರ್ಧರಿಸಲಾದ ತೆರಿಗೆಯ ಜೊತೆಯಲ್ಲಿ ಪ್ರವರ್ತಕನಿಂದ ಬಾಕಿಯಿದ್ದ, ಆದರೆ ಅವನು ವಿವರಪಟ್ಟಿಕೆಗಳಲ್ಲಿ ಪ್ರಕಟಪಡಿಸದಿದ್ದ ತೆರಿಗೆ ಮೊಬಲಗಿನ ಅರ್ಧ ಭಾಗಕ್ಕೆ ಸಮನಾದ ದಂಡವನ್ನು ಮತ್ತು ವಿವರಪಟ್ಟಿಕೆ ಸಲ್ಲಿಸದ ಸಂದರ್ಭದಲ್ಲಿ ನಿರ್ಧರಿಸಲಾದ ತೆರಿಗೆಯ ಅರ್ಧಭಾಗಕ್ಕೆ ಸಮನಾದ ದಂಡವನ್ನು ಸಂದಾಯಮಾಡಲು ಪ್ರವರ್ತಕನಿಗೆ ನಿರ್ದೇಶಿಸಬಹುದು.

**10. ತೆರಿಗೆ ನಿರ್ಧರಣೆ ತಪ್ಪಿಸಿಕೊಂಡಿದ್ದ ಡ್ರಾದ ತೆರಿಗೆ ನಿರ್ಧರಣೆ.-** (1) ಯಾವುದೇ ಡ್ರಾ ತೆರಿಗೆ ನಿರ್ಧರಣೆಯಿಂದ ತಪ್ಪಿಹೋಗಿದೆ ಅಥವಾ ಈ ಅಧ್ಯಾದೇಶದ ಅಡಿಯಲ್ಲಿ ನಿರ್ಧರಿಸಬಹುದಾದ ದರಕ್ಕಿಂತ ಕಡಿಮೆ ದರದಲ್ಲಿ ಅದರ ತೆರಿಗೆ ನಿರ್ಧರಿಸಲಾಗಿದೆ ಎಂದು ನಂಬಲು ಸಹಾಯಕ ಆಯುಕ್ತನಿಗೆ ಕಾರಣವಿದ್ದರೆ, ತೆರಿಗೆ ನಿರ್ಧರಣೆ ಅಥವಾ ಮರು ತೆರಿಗೆ ನಿರ್ಧರಣೆ ಸಮಯದಲ್ಲಿ ಆ ಡ್ರಾ ಸಂಬಂಧದಲ್ಲಿ ತೆರಿಗೆ ನಿರ್ಧರಣೆಯು ತನ್ನ ಮುಂದೆ ಇದ್ದಾಗ್ಯೂ, (3)ನೇ ಉಪಪ್ರಕರಣದ ಉಪಬಂಧಗಳಿಗೆ

ಒಳಪಟ್ಟು, ಆ ತೆರಿಗೆ ಯಾವ ಅವಧಿಗೆ ಸಂಬಂಧಪಟ್ಟಿದೆಯೋ ಆ ಅವಧಿ ಮುಕ್ತಾಯವಾದಾಗಿನಿಂದ ಮೂರು ವರ್ಷಗಳ ಅವಧಿಯ ಒಳಗೆ ಯಾವುದೇ ಕಾಲದಲ್ಲಿ, ಪ್ರವರ್ತಕನಿಗೆ ಒಂದು ನೋಟೀಸು ನೀಡಿದ ತರುವಾಯ ಮತ್ತು ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ ಆ ಡ್ರಾ ಸಂಬಂಧದಲ್ಲಿ ಪ್ರವರ್ತಕನು ಸಂದಾಯಮಾಡತಕ್ಕ ತೆರಿಗೆಯನ್ನು ತನ್ನ ಬಹುಮಟ್ಟಿನ ವಿವೇಚನೆ ಮೇರೆಗೆ ತೆರಿಗೆ ನಿರ್ಧರಣೆ ಅಥವಾ ಮರು ತೆರಿಗೆ ನಿರ್ಧರಣೆ ಮಾಡಲು ಮುಂದುವರಿಯತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ತೆರಿಗೆ ನಿರ್ಧರಣೆ ಮಾಡುವಾಗ ಉಪ ಆಯುಕ್ತರು, ತೆರಿಗೆ ನಿರ್ಧರಣೆ ತಪ್ಪಿಹೋಗಲು ಪ್ರವರ್ತಕನು ಡ್ರಾ ಆದ ಬಗ್ಗೆ ಉದ್ದೇಶಪೂರ್ವಕವಾಗಿ ಬಹಿರಂಗಪಡಿಸದೇ ಇರುವುದೇ ಕಾರಣ ಎಂದು ತನಗೆ ಮನದಟ್ಟಾದರೆ, (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಧರಣೆ ಮಾಡಿದ ತೆರಿಗೆಯ ಜೊತೆಯಲ್ಲಿ ಹಾಗೆ ತೆರಿಗೆ ನಿರ್ಧರಣೆ ಮಾಡಿದ ತೆರಿಗೆಯ ಅರ್ಧಭಾಗಕ್ಕೆ ಸಮನಾದ ದಂಡವನ್ನು ಸಂದಾಯಮಾಡಲು ನಿರ್ದೇಶಿಸಬಹುದು:

ಪರಂತು, ಬಾಧಿತನಾದ ಪ್ರವರ್ತಕನು ಹಾಗೆ ದಂಡ ವಿಧಿಸುವುದರ ವಿರುದ್ಧ ಕಾರಣವನ್ನು ತೋರಿಸಲು ಸಮಂಜಸ ಅವಕಾಶವನ್ನು ಹೊಂದಿದ ಹೊರತು ಈ ಉಪಪ್ರಕರಣದ ಅಡಿಯಲ್ಲಿ ಯಾವ ದಂಡವನ್ನು ಸಂದಾಯಮಾಡಲು ನಿರ್ದೇಶಿಸತಕ್ಕದ್ದಲ್ಲ.

(3) ಈ ಪ್ರಕರಣದಡಿಯಲ್ಲಿ ತೆರಿಗೆ ನಿರ್ಧರಣೆಗೆ ಕಾಲಪರಿಮಿತಿಯ ಅವಧಿಯನ್ನು ಲೆಕ್ಕಹಾಕುವಾಗ, ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ನೀಡಿದ ಯಾವುದೇ ತಡೆಯಾಜ್ಞೆಯ ಕಾರಣದಿಂದ ಅಥವಾ ಒಂದು ಅಪೀಲು ಅಥವಾ ಇತರ ವ್ಯವಹರಣೆಯು ಇತ್ಯಾರ್ಥದಲ್ಲಿದೆ ಎಂಬ ಕಾರಣದಿಂದ ಒಂದು ತೆರಿಗೆ ನಿರ್ಧರಣೆಯನ್ನು ಮುಂದೂಡಲಾಗಿದ್ದ ಸಮಯವನ್ನು ಬಿಟ್ಟುಬಿಡತಕ್ಕದ್ದು:

ಪರಂತು, ಯಾವ ಸಮಯದೊಳಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಹುದೋ ಅಥವಾ ಯಾವುದೇ ಆದೇಶ, ತೆರಿಗೆ ನಿರ್ಧರಣೆ ಅಥವಾ ಮರು ತೆರಿಗೆ ನಿರ್ಧರಣೆ ಮಾಡಬಹುದೋ ಆ ಸಮಯವನ್ನು ಪರಿಮಿತಿಗೊಳಿಸುವ ಈ ಪ್ರಕರಣದಲ್ಲಿರುವ ಯಾವುದೂ, 15 ರಿಂದ 18ನೇ ಪ್ರಕರಣಗಳ ಅಡಿಯಲ್ಲಿ ಮಾಡಲಾದ ಯಾವುದೇ ನಿರ್ಣಯ, ನಿರ್ದೇಶನ ಅಥವಾ ಆದೇಶದ ಅಥವಾ ಸರ್ವೋಚ್ಚ ನ್ಯಾಯಾಲಯ, ಉಚ್ಚನ್ಯಾಯಾಲಯ ಅಥವಾ ಯಾವುದೇ ಇತರ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶದ ಪರಿಣಾಮವಾಗಿ ಅಥವಾ ಅದನ್ನು ಜಾರಿಗೊಳಿಸಲು ಪ್ರವರ್ತಕನ ಬಗ್ಗೆ ಮಾಡಲಾದ ತೆರಿಗೆ ನಿರ್ಧರಣೆ ಅಥವಾ ಮರು ತೆರಿಗೆ ನಿರ್ಧರಣೆಗೆ ಅನ್ವಯಿಸತಕ್ಕದ್ದಲ್ಲ.

**11. ಮುಂಗಡವಾಗಿ ಕರಸಂದಾಯ.-** ನಿಯಮಿಸಬಹುದಾದಂತಹ ನಿಯಮಗಳಿಗೆ ಒಳಪಟ್ಟು ಪ್ರತಿಯೊಬ್ಬ ಪ್ರವರ್ತಕನೂ ಪ್ರತಿ ಸೋಮವಾರ ಸಹಾಯಕ ಆಯುಕ್ತನಿಗೆ, ಆ ದಿನದ ತರುವಾಯ ಬರುವ ಎರಡನೇ ಸೋಮವಾರದಿಂದ ಆರಂಭಗೊಂಡ ಆ ವಾರದಲ್ಲಿ ನಡೆಸಲಿರುವ ಡ್ರಾಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂತಹ ವಿವರಗಳನ್ನೊಳಗೊಂಡ ಒಂದು ವಿವರ ಪತ್ರವನ್ನು ಸಲ್ಲಿಸತಕ್ಕದ್ದು ಮತ್ತು ವಿವರಪತ್ರದಲ್ಲಿ ತೋರಿಸಿದ ಡ್ರಾಗಳ ಸಂಬಂಧದಲ್ಲಿ ಈ ಅಧ್ಯಾದೇಶದ ಅಡಿಯಲ್ಲಿ ಆತ ಸಂದಾಯಮಾಡತಕ್ಕ ಪೂರ್ಣ ಮೊಬಲಗನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡತಕ್ಕ ಮೊಬಲಗುಗಳನ್ನು 12ನೇ ಪ್ರಕರಣದ ಉದ್ದೇಶಕ್ಕಾಗಿ ಅಂಥ ಪ್ರವರ್ತಕನಿಂದ ಈ ಅಧ್ಯಾದೇಶದಡಿಯಲ್ಲಿ ಬಾಕಿಯಾದ ಮೊಬಲಗು ಎಂದು ಭಾವಿಸತಕ್ಕದ್ದು:

ಪರಂತು, ಈ ಅಧ್ಯಾದೇಶದ ಪ್ರಾರಂಭದ ನಿಕಟತರುವಾಯ ನಡೆಸಲಿರುವ ಯಾವುದೇ ಡ್ರಾಗೆ ಸಂಬಂಧಪಟ್ಟ ತೆರಿಗೆಯನ್ನು ಅಂಥ ಪ್ರಾರಂಭದಿಂದ ಐದು ದಿನಗಳ ಒಂದು ಅವಧಿಯ ಒಳಗೆ ಸಂದಾಯಮಾಡತಕ್ಕದ್ದು:

ಮತ್ತೂ ಪರಂತು, ಯಾವುದೇ ಸೋಮವಾರ ಕೆಲಸದ ದಿನವಲ್ಲದೇ ಹೋದರೆ, ವಿವರ ಪತ್ರವನ್ನು ನಿಕಟ ತರುವಾಯದ ಕೆಲಸದ ದಿನದಂದು ಸಲ್ಲಿಸತಕ್ಕದ್ದು.

(2) ಯಾವುದೇ ವಾರಕ್ಕಾಗಿ ತೆರಿಗೆ ಸಂದಾಯ ಮಾಡುವಲ್ಲಿ ತಪ್ಪಿದಲ್ಲಿ, (1)ನೇ ಉಪಪ್ರಕರಣದಡಿ ಆಗತ್ಯವಾದ ವಿವರ ಪತ್ರವನ್ನು ಸಲ್ಲಿಸಿರಲಿ ಅಥವಾ ಇಲ್ಲದಿರಲಿ ಅಥವಾ ಸಂದಾಯಮಾಡಿದ ತೆರಿಗೆ ಯಾವುದೇ ವಾರಕ್ಕೆ ಸಂದಾಯಮಾಡತಕ್ಕ ತೆರಿಗೆಗಿಂತ ಕಡಿಮೆ ಇದ್ದರೆ, ತೆರಿಗೆ ಸಂದಾಯಮಾಡಲು ತಪ್ಪಿದ ಅಥವಾ ಕಡಿಮೆ ತೆರಿಗೆ ಸಂದಾಯ ಮಾಡಿದ ಪ್ರವರ್ತಕನು ತೆರಿಗೆಯ ಜೊತೆಗೆ ಹಾಗೆ ಸಂದಾಯತಪ್ಪಿಸಿದ ಅಥವಾ ಕಡಿಮೆ ಸಂದಾಯ ಮಾಡಿದ ದಿನಾಂಕದಿಂದ ಅಂಥ ತೆರಿಗೆಸಂದಾಯ ಮಾಡಿದ ದಿನಾಂಕದವರೆಗೆ ತಿಂಗಳಿಗೆ ಶೇ. ಎರಡರ ದರದಲ್ಲಿ ಲೆಕ್ಕಹಾಕಲಾದ ಬಡ್ಡಿಯನ್ನು ಸಂದಾಯಮಾಡತಕ್ಕದ್ದು.

(3) ಪ್ರವರ್ತಕನು (1)ನೇ ಉಪಪ್ರಕರಣದಡಿಯಲ್ಲಿ ನಿಯಮಿಸಲಾದ ದಿನಾಂಕಕ್ಕಿಂತ ಮುಂಚೆ ಅಂಥ ಯಾವ ವಿವರ ಪತ್ರವನ್ನೂ ಸಲ್ಲಿಸದಿದ್ದರೆ ಅಥವಾ ಅವನು ಸಲ್ಲಿಸಿದ ವಿವರ ಪತ್ರವು ಸಹಾಯಕ ಆಯುಕ್ತನಿಗೆ ಸರಿಯಲ್ಲ ಅಥವಾ ಅಪೂರ್ಣವೆಂದು ಕಂಡುಬಂದರೆ ಸಹಾಯಕ ಆಯುಕ್ತನು ತನ್ನ ಬಹುಮಟ್ಟಿನ ವಿವೇಚನೆ ಮೇರೆಗೆ ಪ್ರವರ್ತಕನ ಬಗ್ಗೆ ತಾತ್ಕಾಲಿಕವಾಗಿ ಕರನಿರ್ಧರಣೆ ಮಾಡಬಹುದು ಮತ್ತು ಅಂಥ ತೆರಿಗೆ ನಿರ್ಧರಣೆಗೆ ತನ್ನ ಕಾರಣಗಳನ್ನು ದಾಖಲಿಸತಕ್ಕದ್ದು ಹಾಗೂ ಅಂಥ ತೆರಿಗೆ ನಿರ್ಧರಣೆ ಆಧಾರದ ಮೇಲೆ ಕೂಡಲೇ ತೆರಿಗೆ ತಗಾದೆ ಮಾಡಿ ವಸೂಲು ಮಾಡಲು ಮುಂದುವರಿಯತಕ್ಕದ್ದು:

ಪರಂತು, ಈ ಉಪಪ್ರಕರಣದಡಿಯಲ್ಲಿ ಕ್ರಮ ಕೈಗೊಳ್ಳುವ ಮೊದಲು ಪ್ರವರ್ತಕನಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶ ನೀಡತಕ್ಕದ್ದು.

12. **ತೆರಿಗೆ ಸಂದಾಯ ಮತ್ತು ವಸೂಲಿ.-** (1) ಈ ಅಧ್ಯಾದೇಶದ ಅಡಿಯಲ್ಲಿ ಬಾಕಿಯಾದ ತೆರಿಗೆ ಅಥವಾ ಇನ್ಯಾವುದೇ ಮೊಬಲಗನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಅಥವಾ ಅಂಥ ಸಮಯಗೊಳಗೆ ಸಂದಾಯ ಮಾಡತಕ್ಕದ್ದು.

(2) (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಸಂದಾಯ ಮಾಡುವುದಕ್ಕೆ ಏನಾದರೂ ತಪ್ಪಿದಲ್ಲಿ,

(i) ಸಂದಾಯ ತಪ್ಪಿದ ದಿನಾಂಕದಂದು ಬಾಕಿ ಉಳಿದ ಇಡೀ ಮೊಬಲಗು ಕೂಡಲೇ ಬಾಕಿಯಾಗತಕ್ಕದ್ದು ಮತ್ತು ಈ ಅಧ್ಯಾದೇಶದ ಅಡಿಯಲ್ಲಿ ತೆರಿಗೆ ಸಂದಾಯಮಾಡಲು ಹೊಣೆಗಾರನಾದ ಪ್ರವರ್ತಕನ ಸ್ವತ್ತಿನ ಮೇಲೆ ಒಂದು ಋಣಭಾರವಾಗತಕ್ಕದ್ದು.

(ii) ಈ ಅಧ್ಯಾದೇಶದ ಅಡಿಯಲ್ಲಿ ತೆರಿಗೆ ಅಥವಾ ಯಾವುದೇ ಇತರ ಮೊಬಲಗನ್ನು ಸಂದಾಯ ಮಾಡಲು ಹೊಣೆಗಾರನಾದ ಪ್ರವರ್ತಕನು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯವು ಮುಕ್ತಾಯವಾದ ತರುವಾಯ ಪ್ರತಿ ತಿಂಗಳಿಗೆ ಸಂದಾಯವಾಗದೆ ಉಳಿದ ತೆರಿಗೆ ಮೊಬಲಗಿನ ಅಥವಾ ಯಾವುದೇ ಇತರ ಮೊಬಲಗಿನ ಶೇಕಡಾ ಎರಡಕ್ಕೆ ಸಮನಾದ ಬಡ್ಡಿಯನ್ನು ಸಂದಾಯಮಾಡತಕ್ಕದ್ದು.

**ವಿವರಣೆ:-** (ii)ನೇ ಖಂಡದ ಉದ್ದೇಶಕ್ಕಾಗಿ ಒಂದು ತಿಂಗಳಿನ ಒಂದು ಭಾಗಕ್ಕಾಗಿ ಸಂದಾಯವಾಗತಕ್ಕ ಬಡ್ಡಿಯನ್ನು ಪ್ರಮಾಣಾನುಸಾರ ನಿರ್ಧರಿಸತಕ್ಕದ್ದು.

(3) ಸಂದಾಯವಾಗತಕ್ಕ ದಿನಾಂಕದ ತರುವಾಯ ಈ ಅಧ್ಯಾದೇಶದ ಅಡಿಯಲ್ಲಿ ಸಂದಾಯವಾಗದೇ ಉಳಿದ ಯಾವುದೇ ಮೊಬಲಗು ಈ ಅಧ್ಯಾದೇಶದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪ್ರವರ್ತಕನಿಂದ ವಸೂಲಾಗಬಹುದಾಗಿರತಕ್ಕದ್ದು.

(4) ಪ್ರವರ್ತಕನಿಂದ ಅಥವಾ ಯಾವೊಬ್ಬ ವ್ಯಕ್ತಿಯಿಂದ ಬಾಕಿಯಾದ ಅಥವಾ ಕರನಿರ್ಧರಿಸಲಾದ ಯಾವುದೇ ತೆರಿಗೆ ಅಥವಾ ಇತರ ಯಾವುದೇ ಮೊಬಲಗು ಇನ್ಯಾವುದೇ ವಸೂಲಿ ವಿಧಾನಕ್ಕೆ ಬಾಧಕವಾಗದಂತೆ.

(i) ಅದೊಂದು ಕಂದಾಯದ ಬಾಕಿ ಎಂಬಂತೆ; ಅಥವಾ

(ii) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) ಅಡಿಯಲ್ಲಿ ಮಾರಾಟ ತೆರಿಗೆಯ ಒಂದು ಬಾಕಿ ಎಂಬಂತೆ

- ವಸೂಲಾಗತಕ್ಕದ್ದು.

**13. ಕೆಲವು ಇತರ ವ್ಯಕ್ತಿಗಳಿಂದ ತೆರಿಗೆ, ದಂಡ ಅಥವಾ ಇತರ ಯಾವುದೇ ಮೊಬಲಗಿನ ವಸೂಲಿ.-** (1) ಸಹಾಯಕ ಆಯುಕ್ತನು, ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ, ಲಿಖಿತ ನೋಟೀಸು ನೀಡುವ ಮೂಲಕ, ಅದರ ಒಂದು ಪ್ರತಿಯನ್ನು ಸಹಾಯಕ ಆಯುಕ್ತನು, ತನಗೆ ತಿಳಿದಿರುವ ಪ್ರವರ್ತಕನ ಇತ್ತೀಚಿನ ವಿಳಾಸಕ್ಕೆ ಕಳುಹಿಸಿ, ಪ್ರವರ್ತಕನಿಗೆ ಅಥವಾ ಇತರ ವ್ಯಕ್ತಿಗೆ ಯಾರಿಂದ ಹಣ ಬಾಕಿ ಇದೆಯೋ ಅಥವಾ ಬಾಕಿಯಾಗಬಹುದೋ ಆ ಇತರ ವ್ಯಕ್ತಿಗೆ, ಅಥವಾ ಪ್ರವರ್ತಕನಿಗಾಗಿ ಅಥವಾ ಇತರ ವ್ಯಕ್ತಿಗಾಗಿ ಅಥವಾ ಅವನ ನಿಮಿತ್ತವಾಗಿ ಹಣವನ್ನು ಇಟ್ಟು ಕೊಂಡಿರುವ ಅಥವಾ ತರುವಾಯ ಇಟ್ಟುಕೊಳ್ಳಬಹುದಾದ ಇತರ ವ್ಯಕ್ತಿಗೆ, ಹಣವು ಬಾಕಿಯಾದ ಅಥವಾ ಹೊಂದಿದ ತಕ್ಷಣವೇ ಆಗಲಿ ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಆಗಲಿ, ಹಾಗೆ ಬಾಕಿಯಾಗುವುದಕ್ಕೆ ಅಥವಾ ಹೊಂದಿರುವುದಕ್ಕೆ ಮುಂಚಿತವಾಗಿಲ್ಲದಂತೆ, ತೆರಿಗೆ ಬಾಕಿಗಳು ಅಥವಾ ದಂಡಕ್ಕೆ ಸಂಬಂಧಿಸಿದಂತೆ ಪ್ರವರ್ತಕನಿಂದ ಬಾಕಿಯಾಗುವ ಮೊಬಲಗನ್ನು ಸಂದಾಯಮಾಡುವುದಕ್ಕೆ ಸಾಕಾಗುವಷ್ಟು ಹಣವನ್ನು ಅಥವಾ ಅದು ಮೊಬಲಗಿಗೆ ಸಮನಾಗಿದ್ದಲ್ಲಿ ಅಥವಾ ಕಡಿಮೆಯಾಗಿದ್ದಲ್ಲಿ ಇಡೀ ಮೊತ್ತವನ್ನು ಸಹಾಯಕ ಆಯುಕ್ತನಿಗೆ ಸಂದಾಯಮಾಡುವಂತೆ ಅಗತ್ಯಪಡಿಸಬಹುದು.

(2) ಸಹಾಯಕ ಆಯುಕ್ತನು, ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ ಯಾವುದೇ ಅಂಥ ನೋಟೀಸನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಪಡಿಸಬಹುದು ಅಥವಾ ನೋಟೀಸಿನ ಅನುಸರಣೆಯಲ್ಲಿ ಯಾವುದೇ ಸಂದಾಯಮಾಡುವುದಕ್ಕಾಗಿ ಸಮಯವನ್ನು ವಿಸ್ತರಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿನ ನೋಟೀಸಿನ ಪಾಲನೆಯಲ್ಲಿ ಯಾವುದೇ ಸಂದಾಯವನ್ನು ಮಾಡುವ ಯಾವೊಬ್ಬ ವ್ಯಕ್ತಿಯು, ಅವನು ಪ್ರವರ್ತಕನು ನೀಡಿದ ಅಧಿಕಾರದ ಮೇರೆಗೆ ಸಂದಾಯವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಸಹಾಯಕ ಆಯುಕ್ತನ ರಸೀದಿಯು, ಆ ರಸೀದಿಯಲ್ಲಿ ಉಲ್ಲೇಖಿಸಲಾದ ಮೊಬಲಗಿನ ಮಟ್ಟಿಗೆ ಅಂಥ ವ್ಯಕ್ತಿಯ ಹೊಣೆಗಾರಿಕೆಯ ಬಗ್ಗೆ ಸಮರ್ಪಕ ಮತ್ತು ಪರ್ಯಾಪ್ತ ವಿಮೋಚನೆಯಾಗಿರತಕ್ಕದ್ದು.

(4) ಈ ಪ್ರಕರಣದಲ್ಲಿ ಉಲ್ಲೇಖಿಸದ ನೋಟೀಸಿನ ಸ್ವೀಕೃತಿಯ ತರುವಾಯ ಪ್ರವರ್ತಕನ ಅಥವಾ ಇತರ ವ್ಯಕ್ತಿಯ, ಯಾವುದೇ ಹೊಣೆಗಾರಿಕೆಯನ್ನು ವಿಮೋಚನೆಗೊಳಿಸುವ ಯಾವೊಬ್ಬ ವ್ಯಕ್ತಿಯು, ವಿಮೋಚನೆಗೊಳಿಸಿದ ಹೊಣೆಗಾರಿಕೆಯಷ್ಟರ ಮಟ್ಟಿಗೆ ಅಥವಾ ಈ ಅಧ್ಯಾದೇಶದ ಅಡಿಯಲ್ಲಿ ಬಾಕಿಯಾಗಿರುವ ಮೊಬಲಗಿಗಾಗಿ ಹೊಣೆಗಾರಿಕೆಯಷ್ಟರ ಮಟ್ಟಿಗೆ, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರಮಟ್ಟಿಗೆ ಸಹಾಯಕ ಆಯುಕ್ತನಿಗೆ ವೈಯಕ್ತಿಕವಾಗಿ ಹೊಣೆಗಾರನಾಗಿರತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ನೋಟೀಸನ್ನು ಕಳುಹಿಸಲಾಗಿರುವ ಯಾವೊಬ್ಬ ವ್ಯಕ್ತಿಯು, ಅಂಥ ನೋಟೀಸನ್ನು ನೀಡಿದ್ದ ಸಹಾಯಕ ಆಯುಕ್ತನಿಗೆ ಮನವರಿಕೆಯಾಗುವಂತೆ ತಗಾದೆ ಮಾಡಲಾಗಿದ್ದ ಯಾವುದೇ ಮೊತ್ತ ಅಥವಾ ಅದರ ಭಾಗವು ಅವನಿಂದ ಪ್ರವರ್ತಕನಿಗೆ ಅಥವಾ ಇತರ ವ್ಯಕ್ತಿಗೆ ಬಾಕಿ ಇಲ್ಲ ಎಂಬುದನ್ನು ಅಥವಾ ಅವನು ಪ್ರವರ್ತಕನಿಗಾಗಿ ಅಥವಾ ಅವನ ನಿಮಿತ್ತವಾಗಿ ಯಾವುದೇ ಹಣವನ್ನು ಇಟ್ಟುಕೊಂಡಿಲ್ಲವೆಂಬುದನ್ನು ರುಜುವಾತುಪಡಿಸಿದಲ್ಲಿ, ಆಗ, ಈ ಪ್ರಕರಣದಲ್ಲಿ ಒಳಗೊಂಡಿರುವುದಾವುದೂ ತಗಾದೆ ಮೊಬಲಗನ್ನು ಅಥವಾ ಅದರ ಭಾಗವನ್ನು ಸಹಾಯಕ ಆಯುಕ್ತನಿಗೆ ಸಂದಾಯಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

(6) ಒಬ್ಬ ವ್ಯಕ್ತಿಯು, ಸಹಾಯಕ ಆಯುಕ್ತನಿಗೆ ಸಂದಾಯ ಮಾಡಬೇಕೆಂದು ಅಗತ್ಯಪಡಿಸಲಾದ ಯಾವುವೇ ಮೊಬಲಗು ಅಥವಾ ಈ ಪ್ರಕರಣದ ಅಡಿಯಲ್ಲಿ ಸಹಾಯಕ ಆಯುಕ್ತನಿಗೆ ಅವನು ವೈಯಕ್ತಿಕವಾಗಿ ಬದ್ಧನಾಗಿರುವ ಯಾವುದೇ ಮೊಬಲಗು, ಸಂದಾಯವಾಗದೇ ಉಳಿದಿದ್ದರೆ, ಸದರಿ ವ್ಯಕ್ತಿಯ ಸ್ವತ್ತುಗಳ ಮೇಲೆ ಅದು ಋಣಭಾರವಾಗಿರತಕ್ಕದ್ದು ಮತ್ತು ಭೂಕಂದಾಯದ ಬಾಕಿ ಅಥವಾ ಮಾರಾಟ ತೆರಿಗೆ ಬಾಕಿ ಎಂಬಂತೆ ಅದನ್ನು ವಸೂಲು ಮಾಡಬಹುದು.

(7) ಈ ಪ್ರಕರಣದ ಉದ್ದೇಶಕ್ಕಾಗಿ ಯಾವೊಬ್ಬ ವ್ಯಕ್ತಿಯು ಒಬ್ಬ ಪ್ರವರ್ತಕನಿಗೆ ಬಾಕಿಕೊಡಬೇಕಾದ ಮೊಬಲಗನ್ನು ಅಥವಾ ಪ್ರವರ್ತಕನಿಗಾಗಿ ಅಥವಾ ಇತರ ವ್ಯಕ್ತಿಗಾಗಿ ಇಲ್ಲವೇ ಅವನ ನಿಮಿತ್ತವಾಗಿ ಹೊಂದಿರುವ ಹಣವನ್ನು ಅಂಥ ವ್ಯಕ್ತಿಗೆ ಅಂಥ ಪ್ರವರ್ತಕನು ಅಥವಾ ಇತರ ವ್ಯಕ್ತಿಯು ಸಂದಾಯಮಾಡುವುದಕ್ಕಾಗಿ ಬಾಕಿಯಾಗಿರಬಹುದಾದಂಥ ಮತ್ತು ಕಾನೂನು ಸಮ್ಮತವಾಗಿ ಅಸ್ತಿತ್ವದಲ್ಲಿರುವಂಥ ಕ್ಲೇಮುಗಳು ಯಾವುದಾದರೂ ಇದ್ದರೆ, ಆ ಕ್ಲೇಮುಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ ಲೆಕ್ಕಹಾಕತಕ್ಕದ್ದು.

**14. ವ್ಯವಹಾರದ ವರ್ಗಾವಣೆಯಾದ ಮೇಲೆ ಸಂದಾಯ ಮಾಡಬೇಕಾದ ತೆರಿಗೆ ಕಾನೂನು ಸಮ್ಮತ ಪ್ರತಿನಿಧಿಗಳ ಬಗ್ಗೆ ತೆರಿಗೆ ನಿರ್ಧರಣೆ, ಇತ್ಯಾದಿ.-** (1)

ಸರ್ಕಾರವನ್ನು ಹೊರತುಪಡಿಸಿ, ಒಬ್ಬ ಪ್ರವರ್ತಕನ ವ್ಯವಹಾರದ ಮಾಲೀಕತ್ವವು ವರ್ಗಾವಣೆಯಾದಾಗ, ವರ್ಗಾವಣೆಯ ಸಮಯದಲ್ಲಿ ಸಂದಾಯವಾಗದೇ ಉಳಿದಿರುವ ಅಥವಾ ಅಂಥ ವ್ಯವಹಾರಕ್ಕೆ ಸಂಬಂಧಿಸಿದಂತೆ ವರ್ಗಾವಣೆಯ ದಿನಾಂಕದ ತರುವಾಯ, ಆದರೆ, ವರ್ಗಾವಣೆಯ ದಿನಾಂಕದವರೆಗಿನ ಅವಧಿಗಳಿಗೆ ಸಂಬಂಧಿಸಿದಂತೆ ಸಂದಾಯವಾಗತಕ್ಕದ್ದಾಗಿರಬಹುದಾದಂಥ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ಸಂದಾಯಮಾಡಲು, ವರ್ಗಾವಣೆದಾರನು ಮತ್ತು ವರ್ಗಾವಣೆ ಪಡೆದವನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗಿರತಕ್ಕದ್ದು ಮತ್ತು ವರ್ಗಾವಣೆ ಪಡೆದವನಿಂದ ವಸೂಲಿಯ ಉದ್ದೇಶಕ್ಕಾಗಿ ಅಂಥ ವರ್ಗಾವಣೆ ಪಡೆದವನನ್ನು ಈ ಅಧ್ಯಾದೇಶದ ಅಡಿಯಲ್ಲಿ ತೆರಿಗೆ ಅಥವಾ ದಂಡ ಅಥವಾ ಬಾಕಿ ಇರುವ ಇತರ ಮೊಬಲಗನ್ನು ಸಂದಾಯಮಾಡಲು ಬದ್ಧನಾದ ಪ್ರವರ್ತಕ ಎಂದು ಪರಿಗಣಿಸತಕ್ಕದ್ದು.

(2) ಈ ಅಧ್ಯಾದೇಶದ ಅಡಿಯಲ್ಲಿ, ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರೆ ಮೊಬಲಗನ್ನು ಸಂದಾಯಮಾಡಲು ಬದ್ಧವಾಗಿರುವ ಯಾವುದೇ ಫರ್ಮು, ಆ ಫರ್ಮು ಮತ್ತು ಅದರ ಪ್ರತಿಯೊಬ್ಬ ಪಾಲುದಾರನು, ಅಂಥ ಸಂದಾಯಕ್ಕಾಗಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗಿರತಕ್ಕದ್ದು.

(3) ತೆರಿಗೆ ಅಥವಾ ದಂಡವನ್ನು ಸಂದಾಯಮಾಡಲು ಬದ್ಧವಾಗಿರುವ ಒಂದು ಫರ್ಮಿನ ವಿಘಟನೆಯಾದಾಗ, ತೆರಿಗೆಯ ನಿರ್ಧರಣೆಯನ್ನು ಮತ್ತು ದಂಡ ವಿಧಿಸುವುದನ್ನು ಆ ಫರ್ಮಿನ ವಿಘಟನೆಯಾಗಿಲ್ಲದಿದ್ದರೆ ಹೇಗೋ ಹಾಗೆ ಮಾಡತಕ್ಕದ್ದು ಮತ್ತು ವಿಘಟನೆಯ ಕಾಲದಲ್ಲಿ ಆಫರ್ಮಿನ ಪಾಲುದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಮರಣ ಹೊಂದಿದ ಅಂಥ ಯಾವೊಬ್ಬ ವ್ಯಕ್ತಿಯ ಕಾನೂನುಬದ್ಧ ಪ್ರತಿನಿಧಿಯು, ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ, ನಿರ್ಧರಣೆ ಮಾಡಲಾಗಿದ್ದ ತೆರಿಗೆಯನ್ನು ಅಥವಾ ವಿಧಿಸಲಾಗಿದ್ದ ದಂಡವನ್ನು ಸಂದಾಯಮಾಡಲು ಹೊಣೆಗಾರನಾಗತಕ್ಕದ್ದು.

(4) ಈ ಅಧ್ಯಾದೇಶದ ಅಡಿಯಲ್ಲಿ ಯಾವುದೇ ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರ ಮೊಬಲಗನ್ನು ಸಂದಾಯಮಾಡಲು ಬದ್ಧನಾದ ಫರ್ಮಿನ ಒಬ್ಬ ಪಾಲುದಾರನು ನಿವೃತ್ತಿ ಹೊಂದಿದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಯಾವುದೇ ಕರಾರು ಇದ್ದರೂ, ಅವನ ನಿವೃತ್ತಿ ಕಾಲದಲ್ಲಿ ಸಂದಾಯವಾಗದೇ ಉಳಿದಿರುವ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರೆ ಯಾವುದೇ ಮೊಬಲಗನ್ನು ಮತ್ತು ತೆರಿಗೆ ನಿರ್ಧರಣೆಯಾಗದಿದ್ದರೂ ಅವನ ನಿವೃತ್ತಿಯ ದಿನಾಂಕದವರೆಗೆ ಬಾಕಿಇರುವ ಯಾವುದೇ ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರ ಮೊಬಲಗನ್ನು ಸಂದಾಯಮಾಡಲು ಹೊಣೆಗಾರನಾಗಿರತಕ್ಕದ್ದು.

(5) ತೆರಿಗೆ ಅಥವಾ ದಂಡವನ್ನು ಸಂದಾಯಮಾಡಲು ಬದ್ಧವಾದ ಒಂದು ಹಿಂದೂ ಅವಿಭಕ್ತ ಕುಟುಂಬವು ಒಂದು ಅಥವಾ ಅಳಿಯ ಸಂತಾನ ಕುಟುಂಬವು ವಿಭಜನೆಯಾದಾಗ ಆ ಕುಟುಂಬದ ವಿಭಜನೆ ನಡೆದಿಲ್ಲದಿದ್ದರೆ ಹೇಗೋ ಹಾಗೆ ತೆರಿಗೆ ನಿರ್ಧರಣೆಯನ್ನು ಮತ್ತು ದಂಡ ವಿಧಿಸುವಿಕೆಯನ್ನು ಮಾಡತಕ್ಕದ್ದು ಮತ್ತು ವಿಭಜನೆಗೆ ಮುಂಚೆ ಆ ಕುಟುಂಬದ ಸದಸ್ಯನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ನಿರ್ಧರಣೆ ಮಾಡಲಾಗಿದ್ದ ತೆರಿಗೆ ಅಥವಾ ವಿಧಿಸಲಾಗಿದ್ದ ದಂಡವನ್ನು ಸಂದಾಯಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗಿರತಕ್ಕದ್ದು.

(6) ಒಬ್ಬ ಪ್ರವರ್ತಕನು ಮರಣ ಹೊಂದಿದಲ್ಲಿ, ಅವನ ನಿರ್ವಾಹಕ, ಆಡಳಿತಗಾರ ಅಥವಾ ಇತರ ಕಾನೂನುಬದ್ಧ ಪ್ರತಿನಿಧಿಯನ್ನು ಈ ಅಧ್ಯಾದೇಶದ ಉದ್ದೇಶಗಳಿಗಾಗಿ ಪ್ರವರ್ತಕ ಎಂದು ಭಾವಿಸತಕ್ಕದ್ದು ಮತ್ತು ಈ ಅಧ್ಯಾದೇಶದ ಉಪಬಂಧಗಳು ಮರಣ ಹೊಂದಿದ ಸದರಿ ಪ್ರವರ್ತಕನ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಅವನಿಗೆ ಅನ್ವಯವಾಗತಕ್ಕದ್ದು:

ಪರಂತು, ಯಾವೊಬ್ಬ ಅಂಥ ಪ್ರವರ್ತಕನು ಸಂದಾಯಮಾಡಬೇಕಾದುದೆಂದು ನಿರ್ಧರಣೆ ಮಾಡಲಾಗಿದ್ದ ಯಾವುದೇ ತೆರಿಗೆ, ದಂಡ ಅಥವಾ ಶುಲ್ಕದ ಸಂಬಂಧದಲ್ಲಿ ಅಥವಾ ಅವನು ಮರಣ ಹೊಂದಿಲ್ಲದಿದ್ದರೆ ಈ ಅಧ್ಯಾದೇಶದ ಅಡಿಯಲ್ಲಿ ಅವನು ಸಂದಾಯಮಾಡಬೇಕಾಗಿದ್ದ ಯಾವುದೇ ತೆರಿಗೆ, ದಂಡ ಅಥವಾ ಶುಲ್ಕದ ಸಂಬಂಧದಲ್ಲಿ ನಿರ್ವಾಹಕ, ಆಡಳಿತಗಾರ ಅಥವಾ ಇತರ ಕಾನೂನು ಬದ್ಧ ಪ್ರತಿನಿಧಿಯು ತನ್ನ ವಶದಲ್ಲಿರುವ ಮೃತನ ಆಸ್ತಿಗಳಷ್ಟರಮಟ್ಟಿಗೆ ಮಾತ್ರ ಹೊಣೆಗಾರನಾಗಿರತಕ್ಕದ್ದು.

## ಅಧ್ಯಾಯ - VI

## ಅಪೀಲು ಮತ್ತು ಪುನರೀಕ್ಷಣೆ

**15. ಅಪೀಲುಗಳು.-** (1) ಸಹಾಯಕ ಆಯುಕ್ತನು ಈ ಅಧ್ಯಾದೇಶದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಅವುಗಳನ್ನು ಆಕ್ಷೇಪಿಸಿ ಸಂಬಂಧಪಟ್ಟ ಅಧಿಕಾರವ್ಯಾಪ್ತಿ ಹೊಂದಿದ ಜಂಟಿ ಆಯುಕ್ತನಿಗೆ ಅಪೀಲು ಮಾಡಿಕೊಳ್ಳಬಹುದು.

(2) ಅಪೀಲು, ಅಂಥ ಆದೇಶ ಪತ್ರ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಹೂಡತಕ್ಕದ್ದು.

(3) (ಎ) ತೆರಿಗೆ ನಿರ್ಧರಣೆಯ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಅದರೊಂದಿಗೆ ಅಪೀಲಿನಲ್ಲಿ ವಿವಾದಿಸದೇ ಇರುವ ತೆರಿಗೆ ಮತ್ತು

ದಂಡ ಸಂದಾಯದ ಬಗ್ಗೆ ತೃಪ್ತಿಕರ ರುಜುವಾತು ಇದ್ದ ಹೊರತು ಅಪೀಲು ಪ್ರಾಧಿಕಾರಿಯು ಪುರಸ್ಕರಿಸತಕ್ಕದ್ದಲ್ಲ;

(ಬಿ) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಪೀಲಿನ್ನು ಹೂಡಿದ್ದರೂ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶಕ್ಕೆ ಅನುಸಾರವಾಗಿ ತೆರಿಗೆ ಅಥವಾ ಇತರ ಮೊಬಲಗನ್ನು ಸಂದಾಯಮಾಡತಕ್ಕದ್ದು.

(4) ಅಪೀಲು, ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಸತ್ಯಾಪನೆ ಮಾಡಿರತಕ್ಕದ್ದು.

(5) ಅಪೀಲನ್ನು ವಿಲೇಮಾಡುವಲ್ಲಿ, ಅಪೀಲು ಪ್ರಾಧಿಕಾರವು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ,-

(i) ಆದೇಶವನ್ನು ಸ್ಥಿರೀಕರಿಸಬಹುದು, ಕಡಿಮೆಗೊಳಿಸಬಹುದು, ಹೆಚ್ಚಿಸಬಹುದು ಅಥವಾ ಶೂನ್ಯಗೊಳಿಸಬಹುದು;

(ii) ಆದೇಶವನ್ನು ರದ್ದುಗೊಳಿಸಬಹುದು ಮತ್ತು ನಿರ್ದೇಶಿಸ ಬಹುದಾದಂಥ ವಿಚಾರಣೆಯ ತರುವಾಯ ಒಂದು ಹೊಸ ಆದೇಶವನ್ನು ಹೊರಡಿಸಲು ನಿಯಮಿಸಲಾದ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು;

(iii) ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಆದೇಶಗಳನ್ನು ಮಾಡಬಹುದು.

(6) ಈ ಪ್ರಕರಣದ ಅಡಿಯಲ್ಲಿ ಅಪೀಲಿನಲ್ಲಿ ಮಾಡಿದ ಪ್ರತಿಯೊಂದು ಆದೇಶವು, 17 ಮತ್ತು 18ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

**16. ಜಂಟಿ ಆಯುಕ್ತನ ಪುನರೀಕ್ಷಣಾ ಅಧಿಕಾರಗಳು.-** (1) ಜಂಟಿ ಆಯುಕ್ತನು, ರಾಜಸ್ವದ ಹಿತಾಸಕ್ತಿಗೆ ಪ್ರತಿಕೂಲ ವಾಗುವಷ್ಟರ ಮಟ್ಟಿಗೆ ಅಂಥ ಆದೇಶದ ಕಾನೂನುಬದ್ಧತೆ ಅಥವಾ ಔಚಿತ್ಯವನ್ನು ಅಥವಾ ಅಂಥ ವ್ಯವಹರಣೆಗಳ ಕ್ರಮಬದ್ಧತೆಯನ್ನು ಸ್ವತಃ ಮನದಟ್ಟುಮಾಡಿಕೊಳ್ಳುವ ಉದ್ದೇಶಕ್ಕಾಗಿ, ಸಹಾಯಕ ಆಯುಕ್ತನು ಈ ಅಧ್ಯಾದೇಶದ ಉಪಬಂಧಗಳ ಅಡಿಯಲ್ಲಿ ಮಾಡಿದ ಮತ್ತು 15ನೇ ಪ್ರಕರಣದ ಅಡಿಯಲ್ಲಿ ಅಪೀಲು ಸಲ್ಲಿಸದೇ ಇರುವ ಯಾವುದೇ ಆದೇಶದ ದಾಖಲೆಗಳನ್ನು ಅಥವಾ ದಾಖಲು ಮಾಡಿದ

ವ್ಯವಹರಣೆಗಳನ್ನು ಸ್ವಪ್ರೇರಣೆಯಿಂದ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದರ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

(2) ಈ ಅಧ್ಯಾದೇಶದ ಅಡಿಯಲ್ಲಿ ಹೊರಡಿಸಲಾದ ಆದೇಶಕ್ಕೆ ಸಂಬಂಧಪಟ್ಟಂತೆ, (1)ನೇ ಉಪ-ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು, ಆದೇಶವನ್ನು ಹೊರಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ಮಾತ್ರ ಚಲಾಯಿಸತಕ್ಕದ್ದು.

(3) ಯಾವುದೇ ತೆರಿಗೆಗೆ ನಿರ್ಧರಣೆಯನ್ನು ಹೆಚ್ಚಿಸಿ (1)ನೇ ಉಪಪ್ರಕರಣದ ಅಡಿಯಲ್ಲಿನ ಯಾವ ಆದೇಶವನ್ನು, ಪ್ರಸ್ತಾವಿತ ಹೆಚ್ಚಳದ ವಿರುದ್ಧ ಕಾರಣಗಳನ್ನು ತೋರಿಸಲು ಪ್ರವರ್ತಕನಿಗೆ ಒಂದು ಅವಕಾಶವನ್ನು ಕೊಟ್ಟಹೊರತು ಹೊರಡಿಸತಕ್ಕದ್ದಲ್ಲ.

(4) ಈ ಪ್ರಕರಣದ ಅಡಿಯಲ್ಲಿ ಪುನರೀಕ್ಷಣೆಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು 17 ಮತ್ತು 18ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

**17. ಆಯುಕ್ತನಿಂದ ಪುನರೀಕ್ಷಣೆ.-** (1) ಆಯುಕ್ತನು, ಈ ಅಧ್ಯಾದೇಶದ ಅಡಿಯಲ್ಲಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ಸ್ವಪ್ರೇರಣೆಯಿಂದ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಯಾವೊಬ್ಬ ತನ್ನ ಅಧೀನ ಅಧಿಕಾರಿಯು, ಆ ಬಗ್ಗೆ ಹೊರಡಿಸಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿರುವಷ್ಟರ ಮಟ್ಟಿಗೆ ದೋಷಪೂರ್ಣವಾಗಿದೆ ಎಂದು ತಾನು ಪರಿಗಣಿಸಿದರೆ, ಅವಶ್ಯವಿದ್ದಲ್ಲಿ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಯವರೆಗೆ, ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ಪ್ರವರ್ತಕನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ಅಥವಾ ಮಾಡಿಸಿದ ತರುವಾಯ ತೆರಿಗೆ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಡಿಸುವ ಅಥವಾ ತೆರಿಗೆ ನಿರ್ಧರಣೆಯನ್ನು ರದ್ದುಗೊಳಿಸುವ ಅಥವಾ ಹೊಸದಾಗಿ ತೆರಿಗೆ ನಿರ್ಧರಣೆಯನ್ನು ನಿರ್ದೇಶಿಸುವ ಆದೇಶವೂ ಒಳಗೊಂಡಂತೆ ಆ ಪ್ರಕರಣದ ಸನ್ನಿವೇಶಗಳಿಗೆ ತಕ್ಕಂಥ ಆದೇಶವನ್ನು ಅದರ ಬಗ್ಗೆ ಹೊರಡಿಸಬಹುದು.

(2) ಪರಿಷ್ಕರಿಸಬೇಕೆಂದು ಕೋರಲಾದ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಮಾತ್ರ (1)ನೇ ಉಪ-ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸತಕ್ಕದ್ದು.

(3) ಆದೇಶದ ವಿರುದ್ಧ ಅಪೀಲು ಮಾಡಲು ಅವಧಿ ಮುಕ್ತಾಯವಾಗಿರದಿದ್ದರೆ ಆಯುಕ್ತನು (1)ನೇ ಉಪಪ್ರಕರಣದ ಅಡಿಯಲ್ಲಿನ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

(4) ಈ ಪ್ರಕರಣದ ಅಡಿಯಲ್ಲಿ ಪುನರೀಕ್ಷಣೆಯಲ್ಲಿ ಜಾರಿಗೊಂಡ ಪ್ರತಿಯೊಂದು ಆದೇಶವು 18ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

**18. ತಪ್ಪುಗಳ ಸರಿಪಡಿಸುವಿಕೆ.-** (1) ದಾಖಲೆಯಿಂದ ಕಂಡುಬರುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ, ಸಹಾಯಕ ಆಯುಕ್ತನು, ಅಪೀಲು ಪ್ರಾಧಿಕಾರಿ ಅಥವಾ ಪುನರೀಕ್ಷಣಾ ಪ್ರಾಧಿಕಾರಿಯು, ತಾನು ಹೊರಡಿಸಿದ ಆದೇಶದ ದಿನಾಂಕದಿಂದ ಎರಡು ವರ್ಷಗಳೊಳಗೆ ಯಾವುದೇ ಸಮಯದಲ್ಲಿ, ಅಂಥ ಆದೇಶದ ತಿದ್ದುಪಡಿ ಮಾಡಬಹುದು:

ಪರಂತು, ತೆರಿಗೆ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಅನ್ಯಥಾ ಪ್ರವರ್ತಕನ ಹೊಣೆಗಾರಿಕೆಯನ್ನು ಹೆಚ್ಚಿಸುವ ಪರಿಣಾಮವುಳ್ಳಂಥ ತಿದ್ದುಪಡಿಯನ್ನು ಸಂದರ್ಭಾನುಸಾರ ಸಹಾಯಕ ಆಯುಕ್ತನು, ಅಪೀಲು ಪ್ರಾಧಿಕಾರಿ ಅಥವಾ ಪುನರೀಕ್ಷಣಾ ಪ್ರಾಧಿಕಾರಿಯು, ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ ನೋಟೀಸನ್ನು ಪ್ರವರ್ತಕನಿಗೆ ಕೊಟ್ಟಿದ್ದಹೊರತು ಮತ್ತು ಸಂಬಂಧಪಟ್ಟ ಪ್ರವರ್ತಕನಿಗೆ ಅಂಥ ತಿದ್ದುಪಡಿಯ ವಿರುದ್ಧ ಅಹವಾಲನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ಕೊಟ್ಟಿದ್ದ ಹೊರತು ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಆದೇಶಕ್ಕೆ ಸಂಬಂಧಪಟ್ಟಂತೆ ಅಪೀಲು ಅಥವಾ ಪುನರೀಕ್ಷಣೆಯ ರೂಪದ ಯಾವುದೇ ವ್ಯವಹರಣೆಯಲ್ಲಿ ಒಂದು ಆದೇಶವನ್ನು ಪರಿಗಣಿಸಿ, ತೀರ್ಮಾನಿಸಿರುವಲ್ಲಿ ಅಂಥ ಆದೇಶವನ್ನು ಮಾಡಿದ ಪ್ರಾಧಿಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ ಹಾಗೆ ಪರಿಗಣಿಸಿ ತೀರ್ಮಾನಿಸಿದ ವಿಷಯವನ್ನು ಬಿಟ್ಟು ಯಾವುದೇ ಇತರ ವಿಷಯಕ್ಕೆ ಸಂಬಂಧಪಟ್ಟಂತೆ ಆ ಉಪ-ಪ್ರಕರಣದ ಅಡಿಯಲ್ಲಿನ ಆದೇಶವನ್ನು ತಿದ್ದುಪಡಿ ಮಾಡಬಹುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶವನ್ನು ಯಾವ ಮೂಲ ಆದೇಶದಲ್ಲಿ ತಪ್ಪನ್ನು ಸರಿಪಡಿಸಲಾಗಿದೆಯೋ ಆ ಮೂಲ ಆದೇಶವನ್ನು ಯಾವ ಕಾನೂನಿನ ಅಡಿಯಲ್ಲಿ ಮಾಡಲಾಗಿತ್ತೋ ಆ ಕಾನೂನಿನ ಅದೇ ಉಪಬಂಧದ ಅಡಿಯಲ್ಲಿ ಮಾಡಿದ ಆದೇಶವೆಂಬುದಾಗಿ ಭಾವಿಸತಕ್ಕದ್ದು.

## ಅಧ್ಯಾಯ - VII

### ಸಂಕೀರ್ಣ

**19. ಪ್ರವರ್ತಕರು ಮತ್ತು ಮಾರಾಟಗಾರರು ನಿರ್ವಹಿಸಬೇಕಾದ ಲೆಕ್ಕಪತ್ರಗಳು ಮತ್ತು ದಾಖಲೆಗಳು.-** (1) ಈ ಅಧ್ಯಾದೇಶದ ಅಡಿಯಲ್ಲಿ ನೋಂದಾಯಿತನಾದ ಅಥವಾ ನೋಂದಾಯಿತನಾಗಲು ಬದ್ಧನಾದ ಪ್ರತಿಯೊಬ್ಬ ಪ್ರವರ್ತಕನು ಅಥವಾ ಇತರೆ ವ್ಯಕ್ತಿಯು, ತನ್ನ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ನಿಯಮಿಸಬಹುದಾದಂಥ ವಿವರಗಳನ್ನು ತೋರಿಸುವಂಥ ನಿಯಮಿಸಬಹುದಾದಂಥ ನಿಜವಾದ ಮತ್ತು ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಅಂಥ ಇತರ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಅಂಥ ಎಲ್ಲಾ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು, ಅವು ಸಂಬಂಧಪಡುವ ವರ್ಷವು ಮುಗಿದ ತರುವಾಯ ಮೂರು ವರ್ಷಗಳು ಮುಕ್ತಾಯವಾಗುವವರೆಗೆ ಅಥವಾ ತೆರಿಗೆ ನಿರ್ಧರಣೆಯ ಅಂತಿಮವಾಗುವವರೆಗೆ ಇವುಗಳಲ್ಲಿ ಯಾವುದು ಅನಂತರದ್ದೋ ಅಲ್ಲಿಯವರೆಗೆ ಪ್ರವರ್ತಕ ಅಥವಾ ಇತರ ವ್ಯಕ್ತಿಯು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಂಡುಬರತಕ್ಕದ್ದು.

(3) ಈ ಅಧ್ಯಾದೇಶದ ಅಡಿಯಲ್ಲಿ ಅಂಥ ಪ್ರವರ್ತಕನು, ಅಪೀಲು ಹೂಡುವ ಪಕ್ಷಕಾರನಾಗಿರುವಲ್ಲಿ, ಅಪೀಲಿನ ಅಥವಾ ಪುನರೀಕ್ಷಣೆಯ ವಸ್ತು ವಿಷಯಕ್ಕೆ ಸಂಬಂಧಪಟ್ಟ ಪ್ರತಿಯೊಂದು ದಾಖಲೆ ಮತ್ತು ಲೆಕ್ಕಪತ್ರ ದಾಸ್ತಾವೇಜುಗಳನ್ನು, ಅಂಥ ಅಪೀಲು ಅಥವಾ ಪುನರೀಕ್ಷಣೆಯು ಮತ್ತು ಆ ಬಗ್ಗೆ ಯಾವುದೇ ಅಪೀಲು ಅಂತಿಮವಾಗಿ ವಿಲೆಯಾಗುವವರೆಗ ಅವುಗಳನ್ನು ಇಟ್ಟುಕೊಂಡು ಬರತಕ್ಕದ್ದು.

**20. ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಹಾಗೂ ಪ್ರವೇಶ, ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರಗಳು.-** (1) ಈ ಸಂಬಂಧದಲ್ಲಿ ಆಯುಕ್ತನು ಅಥವಾ ರಾಜ್ಯಸರ್ಕಾರವು ಪ್ರಾಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯು, ಈ ಅಧ್ಯಾದೇಶದ ಉದ್ದೇಶಕ್ಕಾಗಿ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು,-

(ಎ) ಯಾವೊಬ್ಬ ಪ್ರವರ್ತಕ ಅಥವಾ ಇತರ ವ್ಯಕ್ತಿಯು ಲಾಟರಿ ವ್ಯವಹಾರ ನಡೆಸುತ್ತಿರುವ ವ್ಯವಹಾರ ಸ್ಥಳವನ್ನು ಅಥವಾ ಅಂಥ ವ್ಯವಹಾರವು ನಡೆಯುತ್ತಿದೆ ಎಂದು ಅಥವಾ ಅಂಥ ಪ್ರವರ್ತಕನು ಅಥವಾ ವ್ಯಕ್ತಿಯು, ದಸ್ತಾವೇಜುಗಳೂ ಸೇರಿದಂತೆ ಲೆಕ್ಕಪತ್ರಗಳನ್ನು

ಇಟ್ಟಿದ್ದಾನೆಂದು ಅಂಥ ಅಧಿಕಾರಿಯು ನಂಬಿದ ಇತರ ಯಾವುದೇ, ಸ್ಥಳವನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಬಿ) ಅಂಥ ಪ್ರವರ್ತಕನು ಅಥವಾ ವ್ಯಕ್ತಿಯು ತನ್ನ ವ್ಯವಹಾರದ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳು, ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು, ಅಂಥ ಸಮಯದಲ್ಲಿ ಮತ್ತು ಅಂಥ ಸ್ಥಳದಲ್ಲಿ ಪರಿಶೀಲನೆಗಾಗಿ ಹಾಜರುಪಡಿಸುವಂತೆ ನಿರ್ದೇಶಿಸುವುದು;

(ಸಿ) ಅಂಥ ಲಾಟರಿ ಟಿಕೆಟ್‌ಗಳನ್ನು ಎಲ್ಲೆಲ್ಲಿ ಇಡಲಾಗಿದೆಯೋ ಆ ಸ್ಥಳಗಳನ್ನು ಪ್ರವೇಶಿಸುವುದು ಮತ್ತು ಅಂಥ ಪ್ರವರ್ತಕನ ಸ್ವಾಧೀನತೆಯಲ್ಲಿರುವ ಅಥವಾ ಅಂಥ ಪ್ರವರ್ತಕನ ಪರವಾಗಿ ಇತರ ಯಾವೊಬ್ಬ ವ್ಯಕ್ತಿಯ ಸ್ವಾಧೀನತೆಯಲ್ಲಿರುವ ಲಾಟರಿ ಟಿಕೇಟುಗಳನ್ನು ಪರಿಶೀಲಿಸುವುದು;

(ಡಿ) ವ್ಯವಹಾರಗಳಿಗೆ ಸಂಬಂಧಪಟ್ಟಂತೆ ವಾಸ್ತವಾಂಶಗಳನ್ನು ಮುಚ್ಚಿಡಲಾಗಿದೆ ಎಂದು ಅನುಮಾನಬಂದಲ್ಲಿ, ಪ್ರವರ್ತಕನ ನಿವಾಸ ಸ್ಥಳವೂ ಒಳಗೊಂಡಂತೆ ಪ್ರವರ್ತಕನ ಅಥವಾ ಪ್ರವರ್ತಕನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಅಲ್ಲಿ ಇರುವ ವ್ಯಕ್ತಿಯ ಶೋಧನೆ ಮಾಡುವುದೂ ಸೇರಿದಂತೆ, ಅಂಥ ಸ್ಥಳಗಳನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಇ) ಒಬ್ಬ ಪ್ರವರ್ತಕನು ಅಥವಾ ಇತರ ವ್ಯಕ್ತಿಯು, ಯಾವುದೇ ರೀತಿಯಲ್ಲಿ ತೆರಿಗೆಯನ್ನು ತಪ್ಪಿಸುವ ಅಥವಾ ತೆರಿಗೆಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನೆ ಅಥವಾ ತನ್ನ ತೆರಿಗೆ ಹೊಣೆಗಾರಿಕೆಯನ್ನು ಮರೆಮಾಚುತ್ತಿದ್ದಾನೆಂದು ಅನುಮಾನಿಸಲು ಕಾರಣಗಳಿದ್ದಲ್ಲಿ, ಅಂಥ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ತರುವಾಯ ಆ ಪ್ರವರ್ತಕನಿಂದ ಅಥವಾ ಯಾವೊಬ್ಬ ಇತರ ವ್ಯಕ್ತಿಯಿಂದ ಯಾವುವೇ ಲೆಕ್ಕಪತ್ರಗಳು, ರಿಜಿಸ್ಟರುಗಳು ಅಥವಾ ದಸ್ತಾವೇಜುಗಳನ್ನು ವಶಕ್ಕೆತೆಗೆದುಕೊಳ್ಳುವುದು ಮತ್ತು ಯಾರ ಅಭಿರಕ್ಷೆಯಿಂದ ಅಂಥ ಲೆಕ್ಕ ಪತ್ರಗಳು, ದಾಖಲೆಗಳು ಅಥವಾ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ಪ್ರವರ್ತಕನಿಗೆ ಅಥವಾ ಯಾವೊಬ್ಬ ಇತರ ವ್ಯಕ್ತಿಗೆ ಆ ಬಗ್ಗೆ ಸ್ವೀಕೃತಿ

ಪತ್ರವನ್ನು ಮತ್ತು ಅವನು ಕೋರಿಕೊಂಡಲ್ಲಿ, ಅದರ ಪ್ರತಿಗಳನ್ನು ನೀಡತಕ್ಕದ್ದು ಮತ್ತು ತಾನು ಅವಶ್ಯಕವೆಂದು ಪರಿಗಣಿಸಬಹುದಾದ ಅವಧಿಯವರೆಗೆ ಪರಿಶೀಲನೆ, ವಿಚಾರಣೆ, ಪ್ರಾಷಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳಿಗಾಗಿ ಅವುಗಳನ್ನು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳಬಹುದು;

(ಎಫ್) ಲೆಕ್ಕಪತ್ರಗಳನ್ನು ಅಥವಾ ತೆರಿಗೆಗೆ ಗುರಿಯಾಗತಕ್ಕ ಲಾಟರಿ ಟಿಕೆಟ್‌ಗಳನ್ನು ಇಡಲಾಗಿದೆಯೆಂದು ಅಥವಾ ದಾಸ್ತಾನು ಮಾಡಲಾಗಿದೆಯೆಂದು ಅನುಮಾನ ಬರುವಂಥ ಯಾವುದೇ ಪೆಟ್ಟಿಗೆ ಅಥವಾ ಧಾರಕ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಯಾವುದೇ ಭಾಗವನ್ನು ಅಲ್ಲಿ ವ್ಯವಹಾರ ನಡೆಸುತ್ತಿರುವ ಮಾಲೀಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿ ಅಥವಾ ವ್ಯವಹಾರದ ಪ್ರಭಾರದಲ್ಲಿರುವ ಇತರ ಯಾವೊಬ್ಬ ವ್ಯಕ್ತಿ ಅಥವಾ ಅನುಭೋಗದಲ್ಲಿರುವ ಇತರ ಯಾವೊಬ್ಬ ವ್ಯಕ್ತಿಯು ಆವರಣವನ್ನು ಬಿಟ್ಟುಹೋಗಿದ್ದಲ್ಲಿ ಅಥವಾ ಅವನು ಅಲ್ಲಿ ದೊರೆಯದಿದ್ದಲ್ಲಿ ಅಥವಾ ಯಾವುದೇ ಪೆಟ್ಟಿಗೆ ಅಥವಾ ಧಾರಕವನ್ನು, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮು ಅಥವಾ ಕಟ್ಟಡದ ಯಾವುದೇ ಭಾಗವನ್ನು ತೆರೆಯಲು ಹೇಳಿದಾಗ ಹಾಗೆ ಮಾಡಲು ತಪ್ಪಿದಲ್ಲಿ ಅಥವಾ ನಿರಾಕರಿಸಿದಲ್ಲಿ ಆ ಯಾವುದನ್ನೂ ಮೊಹರು (ಸೀಲ್) ಮಾಡುವುದು;

(ಜಿ) ವ್ಯವಹಾರವನ್ನು ನಡೆಸುತ್ತಿರುವ ಮಾಲೀಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿ ಅಥವಾ ಅನುಭೋಗದಲ್ಲಿರುವ ವ್ಯಕ್ತಿಯು, ಆವರಣವನ್ನು ಬಿಟ್ಟುಹೋಗಿದ್ದಲ್ಲಿ ಅಥವಾ ಧಾರಕ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಭಾಗವನ್ನು ತೆರೆಯಲು ಅವನಿಗೆ ಅವಕಾಶವನ್ನು ಕೊಟ್ಟ ತರುವಾಯ ಅವನು ಹಾಗೆ ಮಾಡಲು ತಪ್ಪಿದಲ್ಲಿ, ಧಾರಕ ಅಥವಾ ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಭಾಗವನ್ನು ಒಡೆದು ತೆರೆಯುವುದು ಮತ್ತು ಅದರಲ್ಲಿ ಕಂಡುಬಂದ ಸರಕುಗಳು ಮತ್ತು ದಸ್ತಾವೇಜುಗಳ ಒಂದು ಪಟ್ಟಿಯನ್ನು ತಯಾರಿಸುವುದು;

(ಎಚ್) ಯಾವೊಬ್ಬ ಪ್ರವರ್ತಕನು ಅಥವಾ ಅವನ ವ್ಯವಸ್ಥಾಪಕ, ಏಜೆಂಟ್ ಅಥವಾ ನೌಕರನ ಹೇಳಿಕೆಯನ್ನು ದಾಖಲಿಸುವುದು, ಯಾವುದೇ ಆವರಣದಲ್ಲಿ ಕಂಡುಬರುವ ದಾಖಲೆಗಳಿಂದ ಉದ್ಧೃತ ಭಾಗವನ್ನು ತೆಗೆದುಕೊಳ್ಳುವುದು ಮತ್ತು ಲೆಕ್ಕಪತ್ರಗಳು, ರಿಜಿಸ್ಟರುಗಳು ದಸ್ತಾವೇಜುಗಳ ಅಥವಾ ಸರಕುಗಳ ಮೇಲೆ ಗುರುತು ಚಿಹ್ನೆಗಳನ್ನು ಹಾಕುವುದು.

(ಐ) ಒಬ್ಬ ಪ್ರವರ್ತಕನ ಅಥವಾ ಒಬ್ಬ ಪ್ರವರ್ತಕನ ಪರವಾಗಿ ಯಾವೊಬ್ಬ ವ್ಯಕ್ತಿಯ ಸ್ವಾಧೀನದಲ್ಲಿ ಕಂಡುಬಂದ ಮತ್ತು ಅವನ ವ್ಯವಹಾರದ ಕ್ರಮದಲ್ಲಿ ನಿರ್ವಹಿಸಲಾಗುತ್ತಿರುವ ಲೆಕ್ಕಪತ್ರಗಳು, ದಾಖಲೆಗಳು ಅಥವಾ ದಸ್ತಾವೇಜುಗಳಲ್ಲಿ ಲೆಕ್ಕ ತೋರಿಸದೇ ಇದ್ದ ತೆರಿಗೆಗೆ ಬದ್ಧವಾದ ಲಾಟರಿ ಟಿಕೆಟ್‌ಗಳ ದಾಸ್ತನನ್ನು ವಶಕ್ಕೆತೆಗೆದುಕೊಳ್ಳುವುದು ಮತ್ತು ಹಾಗೆ ವಶಕ್ಕೆ ತೆಗೆದುಕೊಂಡ ಲಾಟರಿ ಟಿಕೇಟುಗಳನ್ನು ನೀಡಲು ಬಳಸುವ ಸಾಧನ ಅಥವಾ ಉಪಕರಣವೂ ಸೇರಿದಂತೆ ಹಾಗೆ ವಶಕ್ಕೆ ತೆಗೆದುಕೊಂಡ ಲಾಟರಿ ಟಿಕೆಟ್‌ಗಳ ಒಂದು ಪಟ್ಟಿಯನ್ನು ಅಂಥ ಅಧಿಕಾರಿಯು ತಯಾರಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಪ್ರವರ್ತಕನಿಗೆ ಅಥವಾ ಯಾರ ಅಭಿರಕ್ಷೆಯಿಂದ ಆ ಲಾಟರಿ ಟಿಕೆಟ್‌ಗಳನ್ನು ಅಂಥ ಸಾಧನ ಅಥವಾ ಉಪಕರಣವನ್ನು ವಶಕ್ಕೆ ತೆಗೆದುಕೊಳ್ಳಲಾಯಿತೋ ಆ ಯಾವೊಬ್ಬ ಇತರ ವ್ಯಕ್ತಿಗೆ ನೀಡತಕ್ಕದ್ದು;

(ಜೆ) ಮೇಲಿನ (ಇ) ಖಂಡದ ಅಡಿಯಲ್ಲಿ ಲೆಕ್ಕಪತ್ರಗಳು, ದಾಖಲೆಗಳು ಅಥವಾ ದಸ್ತಾವೇಜುಗಳನ್ನು ಅಥವಾ (ಐ) ಖಂಡದ ಅಡಿಯಲ್ಲಿ ಲಾಟರಿ ಟಿಕೆಟ್‌ಗಳನ್ನು ವಶಕ್ಕೆ ತೆಗೆದುಕೊಳ್ಳುವುದು ಸಾಧ್ಯವಾಗದಿರುವ ಸಂದರ್ಭಗಳಲ್ಲಿ ಅಂಥ ಅಧಿಕಾರಿಯು, ಅವುಗಳ ಮಾಲೀಕ ಅಥವಾ ನಿಕಟ ಸ್ವಾಧೀನ ಅಥವಾ ನಿಯಂತ್ರಣ ಹೊಂದಿರುವ ವ್ಯಕ್ತಿಗೆ, ಅಂಥ ಅಧಿಕಾರಿಯ ಪೂರ್ವಾನುಮತಿ ಪಡೆದ ಹೊರತು ಅವುಗಳನ್ನು ಸಾಗಿಸತಕ್ಕದ್ದಲ್ಲ, ಬಿಟ್ಟುಕೊಡತಕ್ಕದ್ದಲ್ಲ, ಅಥವಾ ಅನ್ಯಥಾ ವ್ಯವಹರಿಸತಕ್ಕದ್ದಲ್ಲವೆಂಬ ಆದೇಶವನ್ನು ಜಾರಿಮಾಡುವುದು ಮತ್ತು ಅಂಥ ಆದೇಶವನ್ನು ಜಾರಿಗೊಳಿಸಿದ ತರುವಾಯ, ಆದೇಶದಲ್ಲಿ ಉಲ್ಲೇಖಿಸಿದ

ವಸ್ತುಗಳನ್ನು ಪಡೆದುಕೊಳ್ಳುವುದಕ್ಕಾಗಿ ಅವಶ್ಯಕವೆಂದು ಭಾವಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳುವುದು;

(2) 19ನೇ ಪ್ರಕರಣದ ಅಡಿಯಲ್ಲಿನ ದಾಖಲೆಗಳು ಮತ್ತು ಲೆಕ್ಕಪತ್ರಗಳನ್ನು ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ ನಿರ್ವಹಿಸಲಾಗಿದ್ದಲ್ಲಿ, ಪ್ರವರ್ತಕನು, ಮೇಲ್ಕಂಡ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು ಅಗತ್ಯಪಡಿಸಬಹುದಾದಂತೆ ಅಂಥ ಲೆಕ್ಕ ಪತ್ರಗಳು ಮತ್ತು ದಾಖಲೆಗಳಿಗೆ ಪ್ರವೇಶಾವಕಾಶವನ್ನು ಒದಗಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ (ಡಿ) ಯಿಂದ (ಜಿ), (ಐ) ಮತ್ತು (ಐ) ಖಂಡಗಳ ಅಡಿಯಲ್ಲಿ ಒಬ್ಬ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ಆತನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳಿಗನುಸಾರವಾಗಿ ಚಲಾಯಿಸತಕ್ಕದ್ದು ಮತ್ತು ಪ್ರವರ್ತಕನ ಅಥವಾ ಆ ಇತರ ವ್ಯಕ್ತಿಯ ವಾಸ ಸ್ಥಳವನ್ನು ಪ್ರವೇಶಿಸುವ ಅಧಿಕಾರವನ್ನು, ಆಯುಕ್ತನು ಪ್ರಾಧಿಕೃತಗೊಳಿಸತಕ್ಕದ್ದು.

(4) ಮೇಲ್ಕಂಡ (1)ನೇ ಉಪ-ಪ್ರಕರಣದ ಅಡಿಯಲ್ಲಿ ವಶಕ್ಕೆ ತೆಗೆದುಕೊಳ್ಳಲಾದ, ಕಂಪ್ಯೂಟರ್ ಯಂತ್ರಾಂಶ ಮತ್ತು ತಂತ್ರಾಂಶವೂ ಸೇರಿದಂತೆ ಮತ್ತು ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳ ಮತ್ತು ಇತರ ದಸ್ತಾವೇಜುಗಳನ್ನು ಅಂಥ ಅಧಿಕಾರಿಯು ಅವುಗಳನ್ನು ವಶಕ್ಕೆ ತೆಗೆದುಕೊಂಡ ದಿನಾಂಕದಿಂದ ಒಂದು ನೂರಾ ಎಂಭತ್ತು ದಿನಗಳನ್ನು ಮೀರದ ಅವಧಿಗಾಗಿ, ಆದರೆ, ಸದರಿ ಅವಧಿಯನ್ನು ಮೀರಿ ಅವುಗಳನ್ನು ತನ್ನಲ್ಲಿ ಉಳಿಸಿಕೊಳ್ಳುವುದಕ್ಕೆ ಕಾರಣಗಳನ್ನು ಅವನು ಲಿಖಿತದಲ್ಲಿ ದಾಖಲಿಸಿದ್ದ ಹೊರತು ಮತ್ತು ಅದಕ್ಕೆ ತನ್ನ ನಿಕಟ ಮೇಲಾಧಿಕಾರಿಯ ಅನುಮೋದನೆಯನ್ನು ಪಡೆದಿದ್ದ ಹೊರತು ತನ್ನಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ ಮತ್ತು ಯಾವುದೇ ಸಂದರ್ಭದಲ್ಲಿ ಅಂಥ ಅನುಮೋದನೆಯು ಒಂದು ಬಾರಿಗೆ ಅರವತ್ತು ದಿನಗಳನ್ನು ಮೀರತಕ್ಕದ್ದಲ್ಲ.

(5) ವ್ಯವಹಾರದ ಯಾವುದೇ ಸ್ಥಳದಲ್ಲಿ ಕಂಡುಬಂದ ಸಾಧನಗಳು, ಉಪಕರಣಗಳು ಲೆಕ್ಕಪತ್ರಗಳು, ರಿಜಿಸ್ಟರುಗಳು ಅಥವಾ ದಸ್ತಾವೇಜುಗಳಿಗೆ ಸಂಬಂಧಪಟ್ಟಂತೆ ಯಾರ ವ್ಯವಹಾರವು ಆ ಸ್ಥಳದಲ್ಲಿ ನಡೆಯುತ್ತಿದೆಯೋ ಆ ಪ್ರವರ್ತಕನು ಅಥವಾ ವ್ಯಕ್ತಿಯು ತದ್ವಿರುದ್ಧವಾಗಿ ರುಜುವಾತು ಪಡಿಸಿದ ಹೊರತು ಅವುಗಳು ಆ ವ್ಯವಹಾರಕ್ಕೆ ಸಂಬಂಧಪಟ್ಟಿವೆ ಎಂಬ ಪೂರ್ವಭಾವನೆ ಮಾಡತಕ್ಕದ್ದು.

(6) ಮೇಲಿನ (1)ನೇ ಉಪ-ಪ್ರಕರಣದ (ಐ) ಖಂಡದ ಅಡಿಯಲ್ಲಿ ಲಾಟರಿ ಟಿಕೆಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡುದರ ವಿರುದ್ಧ ಮುಟ್ಟುಗೋಲು ಹಾಕಿಕೊಂಡ

ಲಾಟರಿ ಟಿಕೆಟ್‌ಗಳ ಪ್ರವರ್ತಕನು ಅಥವಾ ವ್ಯಕ್ತಿಯು ಅಪೀಲನ್ನು ಸಲ್ಲಿಸಲು ಏಳು ದಿನಗಳ ಅವಕಾಶವಿರತಕ್ಕದ್ದು.

(7) ಮೇಲಿನ (6)ನೇ ಉಪ-ಪ್ರಕರಣಕ್ಕೆ ಒಳಪಟ್ಟು, ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ತರುವಾಯ, ಯಾವುದೇ ನಿರ್ಧರಣೆಯನ್ನು ಮಾಡಿದ ತೆರಿಗೆಯನ್ನು ಅಥವಾ ಬಾಕಿ ಇರುವ ದಂಡ ಅಥವಾ ಬಡ್ಡಿಯನ್ನು ಸಂದಾಯ ಮಾಡದಿದ್ದಲ್ಲಿ, ಅಧಿಕಾರಿಯು, ಲಾಟರಿ ಟಿಕೆಟ್‌ಗಳನ್ನು ಅಥವಾ ಇತರ ಸರಕನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೆ ಮಾಡತಕ್ಕದ್ದು ಮತ್ತು ಮಾರಾಟದಿಂದ ಬಂದ ಮೊಬಲಗನ್ನು ಅಂಥ ಬಾಕಿ ಮೊಬಲಗಿಗೆ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಹೆಚ್ಚುವರಿಯಾದ ಮೊಬಲಗನ್ನು, ರಾಜ್ಯದಿಂದ ಭರಿಸಲಾದ ವೆಚ್ಚಗಳನ್ನು ಮುರಿದುಕೊಂಡ ತರುವಾಯ, ನಿಯಮಿಸಲಾದ ರೀತಿಯಲ್ಲಿ ಮರುಸಂದಾಯ ಮಾಡತಕ್ಕದ್ದು.

**21. ರುಜುವಾತಿನ ಹೊಣೆ.-** (1) ತೆರಿಗೆ ಸಂದಾಯ ಅಥವಾ ತೆರಿಗೆ ನಿರ್ಧರಣೆಯ ಉದ್ದೇಶಕ್ಕಾಗಿ, ಡ್ರಾ ಮಾಡಿದ ಯಾವುವೇ ಲಾಟರಿ ಟಿಕೆಟುಗಳ ಮೇಲಿನ ತೆರಿಗೆಯ ಸಂದಾಯದ ಯಾವುದೇ ಕ್ಲೇಮು ಸರಿಯಾಗಿದೆ ಎಂದು ರುಜುವಾತುಪಡಿಸುವ ಹೊಣೆಯು ಲಾಟರಿ ಟಿಕೆಟುಗಳ ವಿತರಕರಾಗಿ ಅಥವಾ ಮಾರಾಟ ಏಜಂಟಾಗಿ ಅಥವಾ ಯಾವುದೇ ಇತರ ಸಾಮರ್ಥ್ಯದಲ್ಲಿ ಲಾಟರಿ ಟಿಕೆಟುಗಳ ಮಾರಾಟ ಮಾಡುತ್ತಿರುವ ಪ್ರವರ್ತಕ ಅಥವಾ ಇತರ ವ್ಯಕ್ತಿಯ ಮೇಲೆ ಇರತಕ್ಕದ್ದು.

(2) ಪ್ರವರ್ತಕ ಅಥವಾ ಇತರ ವ್ಯಕ್ತಿಯು ತಾನು ಮಾರಿದ ಅಥವಾ ಹೊಂದಿರುವ ಲಾಟರಿ ಟಿಕೆಟುಗಳಿಗೆ ಸಂಬಂಧಿಸಿದ ಡ್ರಾದ ಮೇಲೆ ತೆರಿಗೆಯನ್ನು ಸಂದಾಯ ಮಾಡಲಾಗಿದೆ ಎಂಬ ಯಾವುದೇ ಕ್ಲೇಮಿಗೆ ಸಮರ್ಥನೆಯಾಗಿ ಅಥವಾ ಹಾಗೆ ಕ್ಲೇಮನ್ನು ಮಾಡುವ ದೃಷ್ಟಿಯಿಂದ ತಿಳಿದೂ ತಿಳಿದು ಸುಳ್ಳು ಘೋಷಣೆ, ಪ್ರಮಾಣಪತ್ರ ಅಥವಾ ಇತರ ದಾಖಲೆಯನ್ನು ನೀಡಿದರೆ ಅಥವಾ ಹಾಜರುಪಡಿಸಿದರೆ, ಸಹಾಯಕ ಆಯುಕ್ತನು, ಹಾಗೆ ನೀಡಿರುವುದು ಅಥವಾ ಹಾಜರುಪಡಿಸಿರುವುದು ಪತ್ತೆ ಆದ ಮೇಲೆ ಅಂಥ ದಾಖಲೆಯನ್ನು ನೀಡಿದ ಅಥವಾ ಹಾಜರುಪಡಿಸಿದ ಪ್ರವರ್ತಕ ಅಥವಾ ವ್ಯಕ್ತಿಯು ಅಂಥ ಕ್ಲೇಮಿನ ಸಂಬಂಧದಲ್ಲಿ ಬಾಕಿ ಇರುವ ತೆರಿಗೆಯ ಮೂರು ಪಟ್ಟನ್ನು ದಂಡವಾಗಿ ಸಂದಾಯ ಮಾಡುವಂತೆ ನಿರ್ದೇಶಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡದ ಸಂದಾಯಕ್ಕಾಗಿ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮೊದಲು ಸಹಾಯಕ ಆಯುಕ್ತನು, ಅಂಥ ದಂಡವನ್ನು ವಿಧಿಸುವುದರ ವಿರುದ್ಧ ಕಾರಣಗಳನ್ನು ಲಿಖಿತದಲ್ಲಿ ತೋರಿಸಲು ಪ್ರವರ್ತಕನಿಗೆ ಒಂದು ಅವಕಾಶವನ್ನು ಕೊಡತಕ್ಕದ್ದು.

## ಅಧ್ಯಾಯ - VIII

### ದಂಡಗಳು, ಅಪರಾಧಗಳು ಮತ್ತು ನಿಯಮಗಳ ರಚನಾಧಿಕಾರ

**22. ನೋಂದಣಿಗೆ ಸಂಬಂಧಿಸಿದ ದಂಡ.-** (1) ಒಬ್ಬ ಪ್ರವರ್ತಕನು, ಸೂಕ್ತ ಕಾರಣಗಳಿಲ್ಲದೆ, ನಿಯಮಿಸಲಾದ ಕಾಲದೊಳಗೆ ನೋಂದಣಿಗಾಗಿ ಅರ್ಜಿ ಸಲ್ಲಿಸಲು ತಪ್ಪಿದಲ್ಲಿ, ಅವನು ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡ ನೀಡುವುದಕ್ಕೆ ಗುರಿಯಾಗತಕ್ಕದ್ದು.

(2) ಯಾವೊಬ್ಬ ವ್ಯಕ್ತಿಯು, ಸೂಕ್ತ ಕಾರಣಗಳಿಲ್ಲದೆ ನಿಯಮಿಸಲಾದ ಕಾಲದೊಳಗೆ ನೋಂದಣಿಗಾಗಿ ಅರ್ಜಿ ಸಲ್ಲಿಸಲು ತಪ್ಪಿದಲ್ಲಿ, ಅವನು ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡ ನೀಡುವುದಕ್ಕೆ ಗುರಿಯಾಗತಕ್ಕದ್ದು

(3) ದಂಡಗಳನ್ನು ವಿಧಿಸುವ ಅಧಿಕಾರವು, ಸಹಾಯಕ ಆಯುಕ್ತನಲ್ಲಿ ನಿಹಿತವಾಗಿರತಕ್ಕದ್ದು.

**23. ವಿವರ ಪತ್ರಗಳ ಅಥವಾ ವಿವರಪಟ್ಟಿಕೆಗಳಿಗೆ ಸಂಬಂಧಿಸಿದಂತೆ ದಂಡಗಳು.-** (1) ಒಬ್ಬ ಪ್ರವರ್ತಕನು ಅಥವಾ ಇತರ ವ್ಯಕ್ತಿಯು, 11ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂಥ ಒಂದು ವಿವರ ಪತ್ರವನ್ನು ಅಥವಾ ವಿವರಪಟ್ಟಿಕೆಯನ್ನು ಒದಗಿಸಲು ತಪ್ಪಿದಲ್ಲಿ ಅಥವಾ ಒದಗಿಸಲಾದ ಯಾವುದೇ ವಿವರ ಪತ್ರದ ಮೇಲೆ ಬಾಕಿ ಇರುವ ತೆರಿಗೆ ಸಂದಾಯಮಾಡಲು ತಪ್ಪಿದಲ್ಲಿ, ಬಾಕಿ ಇರುವ ತೆರಿಗೆಯ ಮೊಬಲಗಿನ ಶೇಕಡಾ ಹತ್ತಕ್ಕೆ ಕಡಿಮೆ ಇಲ್ಲದ, ಆದರೆ ಶೇಕಡ ಐವತ್ತರಷ್ಟಕ್ಕೆ ಮೀರದ, ಮತ್ತಷ್ಟು ದಂಡಕ್ಕೆ ಹೆಚ್ಚಿಗೆಯಾಗಿ ತೆರಿಗೆ ನೀಡಲು ತಪ್ಪಿದ ದಿನವೊಂದಕ್ಕೆ ಒಂದು ಸಾವಿರ ರೂಪಾಯಿಗಳ ದಂಡವನ್ನು ಬಾಕಿ ಇರುವ ಯಾವುದೇ ತೆರಿಗೆ ಅಥವಾ ಬಡ್ಡಿಯೊಂದಿಗೆ ಸಂದಾಯ ಮಾಡುವುದಕ್ಕೆ ಗುರಿಯಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸುವ ಅಧಿಕಾರವು ಸಹಾಯಕ ಆಯುಕ್ತನಲ್ಲಿ ನಿಹಿತವಾಗಿರತಕ್ಕದ್ದು.

**24. ದಾಖಲೆಗಳನ್ನು ಇಡುವುದಕ್ಕೆ ಸಂಬಂಧಿಸಿದ ದಂಡಗಳು.-** (1) 19ನೇ ಪ್ರಕರಣಕ್ಕೆ ಅನುಸಾರವಾಗಿ ಸೂಕ್ತ ದಾಖಲೆಗಳನ್ನು ಇಡಲು ಮತ್ತು ನಿರ್ವಹಿಸಲು ತಪ್ಪಿದ ಯಾವೊಬ್ಬ ಪ್ರವರ್ತಕ ಅಥವಾ ಇತರ ವ್ಯಕ್ತಿಯು, ಐದು ಸಾವಿರ ರೂಪಾಯಿಗಳ ದಂಡಕ್ಕೆ ಮತ್ತು ಅಂಥ ದಂಡ ವಿಧಿಸಿದ್ದರ ವಿರುದ್ಧ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, ದಂಡ ನೀಡಲು ತಪ್ಪುವುದು ಮುಂದುವರೆಯುತ್ತಿರುವವರೆಗೆ

ಪ್ರತಿದಿನಕ್ಕೆ ಒಂದು ಸಾವಿರ ರೂಪಾಯಿಗಳ ಹೆಚ್ಚಿನ ದಂಡವನ್ನು ನೀಡುವುದಕ್ಕೆ ಗುರಿಯಾಗತಕ್ಕದ್ದು.

(2) 19ನೇ ಪ್ರಕರಣಕ್ಕೆ ಅನುಸಾರವಾಗಿ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನು ಉಳಿಸಿಟ್ಟುಕೊಳ್ಳಲು ವಿಫಲನಾದ ಯಾವೊಬ್ಬ ಪ್ರವರ್ತಕ ಅಥವಾ ಇತರ ವ್ಯಕ್ತಿಯು, ದಂಡ ವಿಧಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, ಹತ್ತು ಸಾವಿರ ರೂಪಾಯಿಗಳ ದಂಡಕ್ಕೆ ಗುರಿಯಾಗರತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸುವ ಅಧಿಕಾರವು ಸಹಾಯಕ ಆಯುಕ್ತನಲ್ಲಿ ನಿಹಿತವಾಗಿರತಕ್ಕದ್ದು.

**25. ದಾಖಲೆಗಳನ್ನು ಹಾಜರುಪಡಿಸುವುದಕ್ಕೆ ಮತ್ತು ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ದಂಡಗಳು.–** (1) ಯಾವೊಬ್ಬ ಪ್ರವರ್ತಕ ಅಥವಾ ವ್ಯಕ್ತಿಯು, ಪ್ರಾಧಿಕೃತ ಅಧಿಕಾರಿಯು ಕೋರಿದಾಗ ಈ ಅಧ್ಯಾದೇಶದ ಅಗತ್ಯತೆಗಳಿಗೆ ಅನುಸಾರವಾಗಿ ಯಾವುವೇ ದಾಖಲೆಗಳನ್ನು ಹಾಜರುಪಡಿಸಲು ಅಥವಾ ಯಾವುದೇ ಮಾಹಿತಿಯನ್ನು ಒದಗಿಸಲು ತಪ್ಪಿದಲ್ಲಿ, ದಂಡ ವಿಧಿಸುವುದರ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, ಐದು ಸಾವಿರ ರೂಪಾಯಿಗಳ ದಂಡಕ್ಕೆ ಮತ್ತು ಹಾಗೆ ದಂಡವನ್ನು ನೀಡಲು ತಪ್ಪುವುದು ಮುಂದುವರೆಯುತ್ತಿರುವವರೆಗೆ ಒಂದು ದಿನಕ್ಕೆ ಒಂದು ಸಾವಿರ ರೂಪಾಯಿಗಳ ಹೆಚ್ಚಿನ ದಂಡವನ್ನು ಸಹ ನೀಡುವುದಕ್ಕೆ ಗುರಿಯಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸುವ ಅಧಿಕಾರವು ಸಹಾಯಕ ಆಯುಕ್ತನಲ್ಲಿ ನಿಹಿತವಾಗಿರತಕ್ಕದ್ದು.

**26. ಮೊಹರುಗಳಿಗೆ ಮತ್ತು ಲೆಕ್ಕವಿಡದ ಲಾಟರಿ ಟಿಕೆಟುಗಳಿಗೆ ಸಂಬಂಧಿಸಿದಂತೆ ದಂಡಗಳು.–** (1) 20ನೇ ಪ್ರಕರಣದ (1)ನೇ ಉಪ ಪ್ರಕರಣದ (ಎಫ್) ಖಂಡದ ಉಪಬಂಧಗಳ ಅಡಿಯಲ್ಲಿ ಲಗತ್ತಿಸಿದ ಮೊಹರನ್ನು ತೆಗೆದುಹಾಕುವ ಅಥವಾ ಯಾವುದೇ ಇತರ ರೀತಿಯಲ್ಲಿ ಹಸ್ತಕ್ಷೇಪ ಮಾಡುವ ಯಾವೊಬ್ಬ ವ್ಯಕ್ತಿಯು, ಮೊದಲ ದರ್ಜೆಯ ಮ್ಯಾಜಿಸ್ಟ್ರೇಟರ ದರ್ಜೆಗಿಂತ ಕಡಿಮೆಯಲ್ಲದ, ನ್ಯಾಯಾಲಯದಿಂದ, ಅಪರಾಧ ನಿರ್ಣಯವಾದ ತರುವಾಯ, ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಗೆ ಮತ್ತು ಹದಿನೈದು ದಿನಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ವರ್ಷವನ್ನು ಮೀರದ ಅವಧಿಯ ಕಾರಾವಾಸಕ್ಕೆ ಗುರಿಯಾಗತಕ್ಕದ್ದು.

(2) 20ನೇ ಪ್ರಕರಣದ (1)ನೇ ಉಪ ಪ್ರಕರಣದ (ಐ) ಖಂಡದ ಉಪಬಂಧಗಳ ಅಡಿಯಲ್ಲಿ ಲೆಕ್ಕವಿಡದ ಲಾಟರಿ ಟಿಕೆಟುಗಳ ಸ್ವಾಧೀನವನ್ನು ಹೊಂದಿರುವುದು ಕಂಡುಬಂದ ಯಾವೊಬ್ಬ ವ್ಯಕ್ತಿ ಅಥವಾ ಪ್ರವರ್ತಕನು, ದಂಡವನ್ನು ವಿಧಿಸುವುದರ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, ಐದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸುವ ಅಧಿಕಾರವು 20ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರಿಸಿದ ಅಧಿಕಾರಿಯಲ್ಲಿ ನಿಹಿತವಾಗಿರತಕ್ಕದ್ದು.

**27. ಅಡ್ಡಿಯುಂಟುಮಾಡುವುದು ಇತ್ಯಾದಿ.-** ಯಾವೊಬ್ಬ ವ್ಯಕ್ತಿಯು, ಪ್ರಾಧಿಕೃತನಾದ ಅಧಿಕಾರಿಗೆ ಅಥವಾ ಆತನಿಗೆ ನೆರವಾಗುತ್ತಿರುವ ಇತರ ಯಾವೊಬ್ಬ ಸಾರ್ವಜನಿಕ ನೌಕರನಿಗೆ ಈ ಅಧ್ಯಾದೇಶದ ಅಡಿಯಲ್ಲಿ ಆತನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಡ್ಡಿಯುಂಟು ಮಾಡಿದರೆ, ಆತಂಕ ಉಂಟು ಮಾಡಿದರೆ, ದೈಹಿಕವಾಗಿ ಹಿಂಸಿಸಿದರೆ ಅಥವಾ ಹಲ್ಲೆ ಮಾಡಿದರೆ ಅಥವಾ ಯಾವುದೇ ಸಾಕ್ಷ್ಯದ ಶೋಧನೆಗೆ ಅಥವಾ ಹಾಜರುಪಡಿಸುವಿಕೆಗೆ ತಡೆಯುಂಟು ಮಾಡುವ ಅಥವಾ ಅಡ್ಡಿಯುಂಟು ಮಾಡುವ ಸಂಭವವಿರುವ ಯಾವುದೇ ಕೃತ್ಯವನ್ನು ಮಾಡಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಆದರೆ, ಐವತ್ತು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಗೆ ಮತ್ತು ಹದಿನೈದು ದಿನಗಳಿಗೆ ಕಡಿಮೆಯಿಲ್ಲದ ಅವಧಿಯ ಆದರೆ ಒಂದು ವರ್ಷ ಮೀರದ ಅವಧಿಯ ಕಾರಾವಾಸ ಶಿಕ್ಷೆಗೆ ಗುರಿಯಾಗತಕ್ಕದ್ದು.

**28. ಮೋಸದಿಂದ ತೆರಿಗೆಯನ್ನು ತಪ್ಪಿಸುವುದು.-** 22 ರಿಂದ 26ರ ವರೆಗಿನ ಪ್ರಕರಣಗಳ ಉಪಬಂಧಗಳಿಗೆ ಬಾಧಕವಾಗದಂತೆ, ಯಾವೊಬ್ಬ ವ್ಯಕ್ತಿಯು ತಿಳಿದೂ ತಾನು ಅಥವಾ ಇತರ ಯಾವೊಬ್ಬ ವ್ಯಕ್ತಿಯು ತೆರಿಗೆಯನ್ನು ಮೋಸದಿಂದ ತಪ್ಪಿಸುವುದರಲ್ಲಿ ಸಂಬಂಧಿಸಿದಂತೆ ಅಥವಾ ಆ ಉದ್ದೇಶದಿಂದ ಕ್ರಮವನ್ನು ಕೈಗೊಳ್ಳುವುದರಲ್ಲಿ ತಿಳಿದೂ ತಿಳಿದೂ ಭಾಗಿಯಾಗಿದ್ದರೆ, ಅವನು ಒಂದು ಲಕ್ಷ ರೂಪಾಯಿಗಳ ಅಥವಾ ತಪ್ಪಿಸಿಕೊಳ್ಳಲಾದ ತೆರಿಗೆಯ ಎರಡರಷ್ಟು ಮೊಬಲಗು, ಇವುಗಳಲ್ಲಿ ಯಾವುದು ಹೆಚ್ಚಿನದೋ ಅಷ್ಟು ಮೊಬಲಗಿನ ಜುಲ್ಮಾನೆಗೆ ಅಥವಾ ಆರು ತಿಂಗಳ ಅವಧಿಗೆ ಕಡಿಮೆಯಲ್ಲದ ಆದರೆ, ಐದು ವರ್ಷಗಳನ್ನು ಮೀರದ ಅವಧಿಯ ಕಾರಾವಾಸಕ್ಕೆ ಅಥವಾ ಇವೆರಡಕ್ಕೂ ಗುರಿಯಾಗತಕ್ಕದ್ದು.

**29. ಅಪರಾಧಗಳ ಸಂಜ್ಞಾನ.-** ಯಾವುದೇ ನ್ಯಾಯಾಲಯವು, ಜಂಟಿ ಆಯುಕ್ತರ ಪೂರ್ವ ಮಂಜೂರಾತಿ ಇಲ್ಲದೇ 28ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**30. ಅಪರಾಧಗಳ ರಾಜಿ.-** (1) ಯಾವೊಬ್ಬ ಪ್ರವರ್ತಕನು ಅಥವಾ ವ್ಯಕ್ತಿಯು 26ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಥವಾ 28ನೇ ಪ್ರಕರಣದ ಅಡಿಯಲ್ಲಿ ಒಂದು ಅಪರಾಧ ಮಾಡಿದ್ದರೆ, ಪ್ರಾಧಿಕೃತ ಅಧಿಕಾರಿಯು ಅಂಥ ಪ್ರವರ್ತಕನು ಅಥವಾ ವ್ಯಕ್ತಿಯು ಲಿಖಿತದಲ್ಲಿ ತಪ್ಪೊಪ್ಪಿಗೆ ನೀಡಿದ ಮೇಲೆ ಮತ್ತು ಅದಕ್ಕೆ ಸಂಬಂಧಿಸಿದ ನ್ಯಾಯಾಲಯ ವ್ಯವಹರಣೆಗಳು ಪ್ರಾರಂಭವಾಗುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ರಾಜಿ ಮಾಡಿಕೊಳ್ಳಲು ಆಯ್ಕೆ ಮಾಡಿಕೊಂಡ ತರುವಾಯ ಅಂಥ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು ಮತ್ತು ಪ್ರಾಧಿಕೃತ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂತೆ ಹಣವನ್ನು ಸಂದಾಯ ಮಾಡಲು ಪ್ರವರ್ತಕನಿಗೆ ಅಥವಾ ವ್ಯಕ್ತಿಗೆ ಆದೇಶಿಸಬಹುದು, ಪರಂತು, ಅದು ಆ ಮೊಬಲಗು, ಬಾಕಿ ಇರುವ ಯಾವುದೇ ತೆರಿಗೆ ಮತ್ತು ಬಡ್ಡಿಯ ಜೊತೆಯಾಗಿ ಅಪರಾಧಕ್ಕಾಗಿ ನಿಯಮಿಸಲಾದ ಜುಲ್ಮಾನೆಯ ಮೊಬಲಗನ್ನು ಮೀರತಕ್ಕದ್ದಲ್ಲ.

(2) ಯಾವೊಬ್ಬ ಅಂಥ ಪ್ರವರ್ತಕನು ಒಂದು ಮೊತ್ತದ ಸಂದಾಯಕ್ಕೆ ಸಂಬಂಧಪಟ್ಟಂತೆ ಚೆಕ್ ಅಥವಾ ಇತರ ಯಾವುದೇ ಲಿಖಿತ ಪತ್ರವನ್ನು ಒದಗಿಸುವುದು ಅಪರಾಧದ ರಾಜಿಗಾಗಿ ಹಾಕಿಕೊಂಡ ಒಂದು ಅರ್ಜಿ ಎಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯು ಅಪರಾಧದ ಬಗ್ಗೆ ರಾಜಿಮಾಡಿಕೊಂಡಿರುವಲ್ಲಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶವು,-

(ಎ) ಲಿಖಿತದಲ್ಲಿರತಕ್ಕದ್ದು ಮತ್ತು ಮಾಡಲಾದ ಅಪರಾಧವನ್ನು, ಸಂದಾಯ ಮಾಡತಕ್ಕ ಹಣದ ಮೊತ್ತ ಮತ್ತು ಸಂದಾಯ ಮಾಡುವುದಕ್ಕಾಗಿನ ನಿಗದಿತ ದಿನಾಂಕವನ್ನು ಅದರಲ್ಲಿ ನಿರ್ದಿಷ್ಟಪಡಿಸತಕ್ಕದ್ದು; ಮತ್ತು

(ಬಿ) ಅಪರಾಧವನ್ನು ಮಾಡಿದ ಪ್ರವರ್ತಕನಿಗೆ ಅಥವಾ ವ್ಯಕ್ತಿಗೆ ಅದನ್ನು ಜಾರಿ ಮಾಡತಕ್ಕದ್ದು; ಮತ್ತು

(ಸಿ) ಅಂತಿಮವಾಗಿರತಕ್ಕದ್ದು ಹಾಗೂ ಯಾವುದೇ ಅಪೀಲಿಗೆ ಒಳಪಟ್ಟಿರತಕ್ಕದ್ದಲ್ಲ; ಮತ್ತು

(ಡಿ) ಆದೇಶದಲ್ಲಿ ಹೇಳಲಾದ ಮೊಬಲಗಿನ ಸಂದಾಯಕ್ಕಾಗಿ ಒಂದು ನ್ಯಾಯಾಲಯದ ಡಿಕ್ರಿ ಎಂಬಂತೆ ಅದೇ ರೀತಿಯಲ್ಲಿಯೇ ಜಾರಿಗೊಳಿಸಬಹುದು.

(4) ಪ್ರಾಧಿಕೃತ ಅಧಿಕಾರಿಯು, ಈ ಪ್ರಕರಣದ ಅಡಿಯಲ್ಲಿನ ಅಪರಾಧದ ಸಂಬಂಧದಲ್ಲಿ ರಾಜಿ ಮಾಡಿಕೊಂಡಿರುವಾಗ, ಸಂಬಂಧಪಟ್ಟ ಪ್ರವರ್ತಕನು ಅಥವಾ

ವ್ಯಾಪಾರಿಯು, ಅಂಥ ಅಪರಾಧದ ಸಂಬಂಧದಲ್ಲಿ ಪ್ರಾಷಿಕ್ಯೂಷನ್‌ಗೆ ಅಥವಾ ಈ ಪ್ರಕರಣದ ಅಡಿಯಲ್ಲಿ ಯಾವುದೇ ಮತ್ತಷ್ಟು ದಂಡಕ್ಕೆ ಗುರಿಯಾಗತಕ್ಕದ್ದಲ್ಲ ಮತ್ತು ಅಂಥ ಪ್ರವರ್ತಕನು ಅಥವಾ ವ್ಯಾಪಾರಿಯು, ಸದರಿ ವ್ಯವಹರಣೆಗಳ ವಿರುದ್ಧ ಅಪೀಲು ಮಾಡತಕ್ಕದ್ದಲ್ಲ.

31. **ಕಂಪೆನಿಗಳಿಂದ ಅಪರಾಧಗಳು.-** (1) ಈ ಅಧ್ಯಾದೇಶದ ಅಡಿಯಲ್ಲಿ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧ ನಡೆದ ಕಾಲದಲ್ಲಿ ಅದರ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಹಾಗೂ ಕಂಪನಿಯು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ಕಾನೂನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:-

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದು, ಅಪರಾಧವು ತನ್ನ ತಿಳಿವಳಿಕೆಗೆ ಬರದೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಪ್ಪಿಸುವುದಕ್ಕಾಗಿ ಸೂಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಆತನು ರುಜುವಾತುಪಡಿಸಿದರೆ, ಅಂಥ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ಶಿಕ್ಷೆಗೆ ಗುರಿಯಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಅಪರಾಧವನ್ನು ಕಂಪೆನಿಯು ಮಾಡಿದ್ದಲ್ಲಿ ಮತ್ತು ಅದು ಕಂಪೆನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಉಂಟಾಯಿತೆಂದು ರುಜುವಾತಾದರೆ, ಕಂಪೆನಿಯ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪೆನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**32. ಅಭಿಯೋಜನೆಯಲ್ಲಿ ತೆರಿಗೆ ನಿರ್ಧರಣೆಗಳ ಸಿಂಧುತ್ವವನ್ನು ಪ್ರಶ್ನಿಸತಕ್ಕದ್ದಲ್ಲ.-** ಈ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ತೆರಿಗೆ ನಿರ್ಧರಣೆಯ ಅಥವಾ ಯಾವುದೇ ಶುಲ್ಕ ಅಥವಾ ಇತರ ಮೊಬಲಗನ್ನು ವಿಧಿಸುವುದರ ಸಿಂಧುತ್ವವನ್ನು ಅಥವಾ ಹಾಗೆ ನಿರ್ದೇಶಿಸಿದ ಅಥವಾ ವಿಧಿಸಿದ ಯಾವುದೇ ತೆರಿಗೆ, ಶುಲ್ಕ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಯಾವೊಬ್ಬ ವ್ಯಕ್ತಿಯ ಬದ್ಧತೆಯನ್ನು ಈ ಅಧ್ಯಾದೇಶದ ಅಡಿಯಲ್ಲಿ ಅಥವಾ ಅನ್ಯಥಾ ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿನ ಯಾವುದೇ ಅಭಿಯೋಜನೆ ಅಥವಾ ಇತರೆ ವ್ಯವಹರಣೆಯಲ್ಲಿ ಪ್ರಶ್ನಿಸತಕ್ಕದ್ದಲ್ಲ.

**33. ಕೆಲವು ವ್ಯವಹರಣೆಗಳ ಸಂಬಂಧದಲ್ಲಿ ಪ್ರತಿಷೇಧ ಮತ್ತು ಕಾಲ ಪರಿಮಿತಿ.-** (1) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ, ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನ ವಿರುದ್ಧ ಈ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕಾಗಿ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಅಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನು, ಈ ಅಧ್ಯಾದೇಶದ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಿದ ಕರ್ತವ್ಯಗಳ ನಿರ್ವಹಣೆ ಅಥವಾ ಪ್ರಕಾರ್ಯಗಳನ್ನು ನೆರವೇರಿಸುವ ಕ್ರಮದಲ್ಲಿ ಈ ಕಾರ್ಯವನ್ನು ಸದ್ಭಾವನೆಯಿಂದ ಮಾಡಿದ್ದರೆ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕದ್ದಲ್ಲ.

(3) ಈ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ಫಿರ್ಯಾದು ನೀಡಲಾದ ಯಾವುದೇ ಕಾರ್ಯದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ದಾವೆ, ಅಭಿಯೋಜನೆ ಅಥವಾ ಇತರೆ ವ್ಯವಹರಣೆಗಳನ್ನು ಹೂಡಿದ್ದ ಹೊರತು, ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ ಮತ್ತು ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಯಾವುದೇ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**34. ಈ ಅಧ್ಯಾದೇಶದ ಅಡಿಯಲ್ಲಿ ಉಪಬಂಧಿಸಲಾದಂತೆ ಹೊರತು, ನ್ಯಾಯಾಲಯವು ತೆರಿಗೆ ನಿರ್ಧರಣೆಗಳನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಾಟುಗೊಳಿಸತಕ್ಕದ್ದಲ್ಲ.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾದೇಶದಲ್ಲಿ ಸ್ಪಷ್ಟವಾಗಿ ಉಪಬಂಧಿಸಿದಂತೆ ಹೊರತು,

ಈ ಅಧ್ಯಾದೇಶದ ಉಪಬಂಧಗಳ ಬಲದಿಂದ ಪ್ರಾರಂಭಿಸಲಾದ ಯಾವುದೇ ತೆರಿಗೆ ನಿರ್ಧರಣೆಯನ್ನು ಅಥವಾ ಇತರ ವ್ಯವಹರಣೆಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ಯಾವುದೇ ನ್ಯಾಯಾಲಯವು ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು, ಪುರಸ್ಕರಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ನ್ಯಾಯಾಲಯವು, ಈ ಅಧ್ಯಾದೇಶದ ಅಡಿಯಲ್ಲಿ ಯಾವುದೇ ತೆರಿಗೆ ನಿರ್ಧರಣೆ, ದಂಡ ಅಥವಾ ಬಡ್ಡಿ ವಿಧಿಸುವಿಕೆಯ ಸಿಂಧುತ್ವವನ್ನು ಪ್ರಶ್ನಿಸತಕ್ಕದ್ದಲ್ಲ ಇಲ್ಲವೇ ವ್ಯವಹರಣೆಗಳಿಗೆ ಯಾವುದೇ ತಡೆಆಜ್ಞೆಯನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ಬಾಕಿ ಇರುವ ಯಾವುದೇ ಮೊಬಲಗಿನ ಮರು ವಸೂಲಿಗೆ ಅವಕಾಶ ನೀಡತಕ್ಕದ್ದಲ್ಲ.

**35. ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗುವುದು.-** ಈ ಅಧ್ಯಾದೇಶದ ಅಡಿಯಲ್ಲಿನ ಯಾವುದೇ ವ್ಯವಹರಣೆಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗಲು ಹಕ್ಕುಳ್ಳ ಯಾವೊಬ್ಬ ವ್ಯಕ್ತಿಯು ಅಂಥ ಪ್ರಾಧಿಕಾರದ ಮುಂದೆ,-

(ಎ) ಈ ಸಂಬಂಧದಲ್ಲಿ ಲಿಖಿತವಾಗಿ, ಅವನ ಸಂಬಂಧಿ ಅಥವಾ ವ್ಯಕ್ತಿಯನ್ನು ಕ್ರಮಬದ್ಧವಾಗಿ ಪ್ರಾಧಿಕೃತಗೊಳಿಸಿದ್ದರೆ, ಅವನ ಅಂಥ ಸಂಬಂಧಿ ಅಥವಾ ಅವನು ನಿಯತವಾಗಿ ನಿಯೋಜಿಸಿರುವ ವ್ಯಕ್ತಿಯ ಮೂಲಕ;

(ಬಿ) ಒಬ್ಬ ಕಾನೂನು ವೃತ್ತಿಗಾರನ ಮೂಲಕ;

- ಪ್ರತಿನಿಧಿಸಲ್ಪಡಬಹುದು.

**36. ಸಾಕ್ಷ್ಯ ನೀಡುವುದಕ್ಕಾಗಿ ವ್ಯಕ್ತಿಗಳನ್ನು ಸಮನು ಮಾಡುವ ಅಧಿಕಾರ.-** ಈ ಸಂಬಂಧದಲ್ಲಿ ರಚಿಸಲಾದ ನಿಯಮಗಳ ಮೂಲಕ ಅಧಿಕಾರ ಪಡೆದ ಅಧಿಕಾರಿಗಳು, ಈ ಅಧ್ಯಾದೇಶದ ಅಡಿಯಲ್ಲಿನ ಯಾವುದೇ ವಿಚಾರಣೆಯಲ್ಲಿ ವ್ಯಕ್ತಿಗಳ ಹಾಜರಾತಿಯನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ 5) ಮೂಲಕ ಒಂದು ನ್ಯಾಯಾಲಯಕ್ಕೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

**37. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಅಧಿಸೂಚನೆಯ ಮೂಲಕ, ಈ ಅಧ್ಯಾದೇಶದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,-

(ಎ) ನಿಯಮಿಸಬೇಕೆಂದು ಈ ಅಧ್ಯಾದೇಶವು ಸ್ಪಷ್ಟವಾಗಿ ಅಗತ್ಯಪಡಿಸಿದ ಅಥವಾ ಅನುಮತಿಸಿದ ಎಲ್ಲಾ ವಿಷಯಗಳು;

(ಬಿ) ನೋಂದಣಿಯ ಉದ್ದೇಶಗಳಿಗಾಗಿ ಯಾವೊಬ್ಬ ವ್ಯಕ್ತಿಯ ಹೊಣೆಗಾರಿಕೆಯ ನಿರ್ಧರಣೆ;

(ಸಿ) ನಿಲ್ಲಿಸಿಬಿಟ್ಟಂಥ ಅಥವಾ ಯಾವುದರ ಒಡೆತನವು ಬದಲಾವಣೆಯಾಗಿದೆಯೋ ಆ ವ್ಯವಹಾರದ ಸಂಬಂಧದಲ್ಲಿ ಈ ಅಧ್ಯಾದೇಶದ ಅಡಿಯಲ್ಲಿಯ ತೆರಿಗೆ ನಿರ್ಧರಣೆ;

(ಡಿ) ವಿವರ ಪತ್ರ ಅಥವಾ ವಿವರ ಪಟ್ಟಿಕೆಗಳ ಒಪ್ಪಿಸುವಿಕೆ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಿಸುವುದು ಮತ್ತು ವ್ಯಕ್ತಿಗಳ ಹಾಜರಾತಿಯನ್ನು ಅಮಲ್ಜಾರಿಗೊಳಿಸುವುದು ಹಾಗೂ ಅವರನ್ನು ಪ್ರಮಾಣ ಅಥವಾ ಸತ್ಯ ದೃಢೀಕರಣದ ಮೇಲೆ ವಿಚಾರಣೆ ಮಾಡುವುದು;

(ಇ) ಈ ಅಧ್ಯಾದೇಶದ ಅಡಿಯಲ್ಲಿ ಯಾವುದೇ ನಿಯಮಿಸಲಾದ ಪ್ರಾಧಿಕಾರದ ಮುಂದೆ ಅಥವಾ ಅಂಥ ಪ್ರಾಧಿಕಾರದ ಯಾವುದೇ ತೀರ್ಮಾನದ ಮೇಲಿನ ಅಪೀಲು ಅಥವಾ ಪುನರೀಕ್ಷಣೆಯಲ್ಲಿ ಒದಗಿಸಿದ ವಿವರ ಪಟ್ಟಿಕೆಗಳು ಅಥವಾ ಹಾಜರುಪಡಿಸಿದ ಲೆಕ್ಕ ಪತ್ರಗಳು ಅಥವಾ ದಸ್ತಾವೇಜುಗಳು ಅಥವಾ ಕೊಟ್ಟ ಯಾವುದೇ ಬಗೆಯ ಸಾಕ್ಷ್ಯವನ್ನು ರಹಸ್ಯವಾಗಿಡುವಂತೆ ಖಚಿತ ಪಡಿಸಿಕೊಳ್ಳುವುದು;

(ಎಫ್) ಈ ಅಧ್ಯಾದೇಶದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನೇಮಕಗೊಂಡ ಅಧಿಕಾರಿಗಳ ಕರ್ತವ್ಯಗಳು ಮತ್ತು ಅಧಿಕಾರಗಳು;

(ಜಿ) ನೋಂದಣಿ ಪ್ರಮಾಣ ಪತ್ರಗಳು ಅಥವಾ ಅಂಥ ಪ್ರಮಾಣ ಪತ್ರಗಳ ಅಥವಾ ಯಾವುದೇ ಇತರ ದಸ್ತಾವೇಜಿನ ಪ್ರತಿಗಳ ನೀಡಿಕೆಗಾಗಿ ಸಂದಾಯ ಮಾಡಬೇಕಾದ ಶುಲ್ಕಗಳು;

(ಎಚ್) ಪ್ರವರ್ತಕರು ಅಥವಾ ವ್ಯಕ್ತಿಗಳಿಂದ ಮಾಡಲಾದ ಲಾಟರಿ ಟಿಕೆಟ್‌ಗಳ ಸ್ವೀಕೃತಿಗಳು ಅಥವಾ ಖರೀದಿಗಳ ಮತ್ತು ಮಾರಾಟಗಳ ದಸ್ತಾವೇಜುಗಳ ಅಥವಾ ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಅವುಗಳನ್ನು ರಕ್ಷಿಸಿಡತಕ್ಕ ಅವಧಿ.

(ಐ) ಈ ಅಧ್ಯಾದೇಶದ ಅಡಿಯಲ್ಲಿಯ ವ್ಯವಹರಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅಳವಡಿಸಿ ಕೊಳ್ಳಬೇಕಾದ ನಮೂನೆಗಳನ್ನು ಸಾಮಾನ್ಯವಾಗಿ ನಿಯಂತ್ರಿಸುವುದು;

(ಜೆ) ಈ ಅಧ್ಯಾದೇಶದಲ್ಲಿ ಉಪಬಂಧಿಸಿರದ ಅಥವಾ ಸಾಕಷ್ಟು ಉಪಬಂಧಿಸಿರದ, ಸರ್ಕಾರದ ಅಭಿಪ್ರಾಯದಲ್ಲಿ ಈ ಅಧ್ಯಾದೇಶದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಉಪಬಂಧ ಅವಶ್ಯವಾಗಿರುವಂಥ ಯಾವುದೇ ಇತರ ವಿಷಯ,

- ಇವುಗಳಿಗಾಗಿ ಉಪಬಂಧಿಸಬಹುದು.

(3) ಮೇಲಿನ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವಲ್ಲಿ ಸರ್ಕಾರವು, ಅದರ ಉಲ್ಲಂಘನೆಯ ತಪ್ಪಿತಸ್ಥನಾದ ವ್ಯಕ್ತಿಯು ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟನಿಂದ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಆ ಉಲ್ಲಂಘನೆಯು ಮುಂದುವರೆಯುತ್ತಿರುವಲ್ಲಿ, ಮೊದಲನೆಯ ಉಲ್ಲಂಘನೆಯ ತರುವಾಯ, ಆ ಉಲ್ಲಂಘನೆಯು ಮುಂದುವರೆಯುತ್ತಿರುವ ಪ್ರತಿಯೊಂದು ದಿವಸಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಉಪಬಂಧಿಸಬಹುದು.

(4) ಈ ಅಧ್ಯಾದೇಶದ ಅಡಿಯಲ್ಲಿನ ಯಾವುದೇ ನಿಯಮವನ್ನು ಪೂರ್ವಾನ್ವಯ ಪರಿಣಾಮವುಳ್ಳಂತೆ ರಚಿಸಬಹುದು ಮತ್ತು ಯಾವುದೇ ಅಂಥ ನಿಯಮವನ್ನು ರಚಿಸಿದಾಗ, ಅಂಥ ನಿಯಮವನ್ನು ರಚಿಸುವುದಕ್ಕಾಗಿನ ಕಾರಣಗಳನ್ನು ನಿರ್ದಿಷ್ಟಪಡಿಸುವ ವಿವರ ಪತ್ರವನ್ನು 38ನೇ ಪ್ರಕರಣದ ಅಡಿಯಲ್ಲಿಯ ನಿಯಮದೊಂದಿಗೆ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು ಎಲ್ಲಾ ನಿಯಮಗಳು, 38ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುವೇ ಮಾರ್ಪಾಟುಗಳಿಗೆ ಒಳಪಟ್ಟು ಈ ಅಧ್ಯಾದೇಶದಲ್ಲಿ ಉಪಬಂಧಿಸಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳವುಗಳಾಗಿರತಕ್ಕದ್ದು.

**38. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು.-** ಈ ಅಧ್ಯಾದೇಶದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಹಾಗೂ 39ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು

ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನದ ಅಥವಾ ಅದರ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಆ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯನ್ನು ರಚಿಸತಕ್ಕದ್ದಲ್ಲವೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮ ಅಥವಾ ಅಧಿಸೂಚನೆಯು ಆ ತರುವಾಯ, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆ ಉಂಟುಮಾಡತಕ್ಕದ್ದಲ್ಲ.

**39. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** ಈ ಅಧ್ಯಾದೇಶದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ, ಅವಶ್ಯಕ ಅಥವಾ ಯುಕ್ತವೆಂದು ಅದಕ್ಕೆ ಕಂಡುಬರುವಂಥ ಉಪಬಂಧಗಳನ್ನು ರಚಿಸಬಹುದು.

**ಟಿ.ಎನ್. ಚತುರ್ವೇದಿ**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಎಂ.ಆರ್. ಹೆಗಡೆ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.